www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 10 ಅಕ್ಟೋಬರ್ 2012
Volume : VIII Issue : X October 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಎಚ್ಚರವಾಗಿರು – ವಯಸ್ಕರ ಸ್ವರ
3. ದೇವಾಲಯದ ಪುನ: ಸ್ಥಾಪನೆ
4. ಪ್ರಶ್ನೋತ್ತರಗಳ ಸ್ವರ
5. ಆರೋಗ್ಯ ಸ್ವರ
6. ಅನಾಥರ ಸ್ವರ
7. ಸ್ಥಳೀಯ ಮತ್ತು ವಿದೇಶ ಸುದ್ಧಿ
8. ಪ್ರೀತಿ ಯೇಸುವಿನ ಪ್ರೀತಿ
9. ಪ್ರಾರ್ಥನಾ ಮನವಿಗಳು
10. ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ
11. ಮಹಿಳೆಯರ ಸ್ವರ
12 ಸಾಕ್ಷಿಯ ಸ್ವರ
13. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಿಯ ವಾಚಕರಾದ ಸಹೋ/ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು.

ಕರ್ತನ ಆಗಮನವು ಶೀಘ್ರದಲ್ಲೇ ಬರಲಿದೆ ಎಂಬುದಾಗಿ ದೇವರ ವಾಕ್ಯದ ಆಧಾರದಲ್ಲಿಯೂ, ಲೋಕದಲ್ಲಿ ನಡೆಯುವ ಗುರುತುಗಳ ಮೂಲಕ ನಾವು ತಿಳಿದುಕೊಳ್ಳಬಹುದು. **"ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು"** (ಮತ್ತಾ. 24:14). ಅಂತ್ಯವು ಬರುವುದಕ್ಕಿಂತ ಮುಂಚೆ ಇಡೀ ಲೋಕಕ್ಕೆ ಸುವಾರ್ತೆ ಸಾರಲ್ಪಡಬೇಕು ಅದು ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿ ಹಾಗೂ ದೇವ ಸೇವಕರ ಜವಾಬ್ದಾರಿಯಾಗಿದೆ. **"ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ನಿಮ್ಮ ವಿಷಯದಲ್ಲಿ ದೀರ್ಘ ಶಾಂತಿಯುಳ್ಳವನಾಗಿದ್ದಾನೆ"** (2 ಪೇತ್ರ. 3:9). ಹೇಳುತ್ತದೆ, ಅನೇಕರ ರಕ್ಷಣೆಗಾಗಿ ಆತನ ಬರೋಣವನ್ನು ತಡಮಾಡುತ್ತಿದ್ದಾನೆ. ನಮ್ಮ ಕೆಲಸವನ್ನು ನಾವು ಜವಾಬ್ದಾರಿಯುತವಾಗಿ ಮಾಡುವುದಾದರೆ ಅನೇಕ ಆತ್ಮಗಳು ರಕ್ಷಿಸಲ್ಪಟ್ಟು ಕರ್ತನ ಬರೋಣದಲ್ಲಿ ಆತನಿಂದ ಶ್ಲಾಘನೆಯನ್ನು ನಾವು ಪಡೆದುಕೊಳ್ಳಬಹುದು. ಯಾಕಂದರೆ ಕರ್ತನು ಹೇಳಿದ್ದಾನೆ, ಯೋಹಾ. 12:26ರಲ್ಲಿ ಯಾರು ನನ್ನ ಸೇವೆ ಮಾಡುತ್ತಾರೋ ಆತನಿಗೆ ತಂದೆ ಬಹುಮಾನವನ್ನು ಕೊಡುತ್ತಾನೆ. ತಂದೆಯಾದ ದೇವರು ಕೊಡುವ ಬಹುಮಾನವು ಲೋಕದಲ್ಲಿ ಕೊಡುವ ಎಲ್ಲಾ ಬಹುಮಾನಕ್ಕಿಂತ ಮಿಗಿಲಾಗಿದ ಬಹುಮಾನವಾಗಿದೆ. ಈ ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ಅನೇಕ ಆತ್ಮಗಳು ಕರ್ತನಿಂದ ಸಂಧಿಸಲ್ಪಡಲಿ ಹಾಗೂ ಕರ್ತನ ಬರೋಣಕ್ಕೆ ಸಿದ್ಧರಾಗಲಿ. ನಿಮ್ಮಲ್ಲಿ ಅನೇಕರು ಈ ಮಾಸ ಪತ್ರಿಕೆಯನ್ನು ಇತರರಿಗೆ ಪರಿಚಯಿಸಬಹುದು, ಅನೇಕರ ವಿಳಾಸವನ್ನು ನಮಗೆ ಕಳುಹಿಸಬಹುದು, ಅನೇಕರ ವಿಳಾಸ ಕಳುಹಿಸಿಕೊಟ್ಟು ಅವರ ಚಂದಾ ಹಣವನ್ನು ನೀವು ಭರಿಸಬಹುದು. ಈ ದೇವರ ಸ್ವರ ಮಾಸ ಪತ್ರಿಕೆಯನ್ನು ಪ್ರಾರ್ಥನಾ ಪೂರ್ವಕವಾಗಿ ಎತ್ತಿ ಹಿಡಿಯಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಕರ್ತನು ಚೀಯೋನಿನಿಂದ ಆಶೀರ್ವದಿಸಲಿ, ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪ್ರಕ. 1:10 ಕರ್ತನ ದಿನ ಅಂದರೆ ಆರಾಧನೆಯ ದಿನವಾಗಿ ಅನೇಕರು ಆರಾಧನೆಗೆ ಬರದೆ, ಪ್ರಾರ್ಥಿಸದೆ ದೇವಸಮ್ಮುಖದಲ್ಲಿ ಸಮಯ ಕಳೆಯದೆ ದರ್ಶನಗಳನ್ನು ಕಾಣುತ್ತಾರೆ. ತುಂಬಾ ವಿಚಿತ್ರವಾಗಿದೆ. ಇಬ್ರಿ. 10:25, ಅ.ಕೃ. 2:42 ಸಹೋದರರ ಅನ್ಯೋನ್ಯತೆ ಹಾಗೂ ಸಭೆಯಾಗಿ ಕರ್ತನನ್ನು ಆರಾಧಿಸುವುದನ್ನು ನಾವು ಮರೆಯಬಾರದು. ಸಭೆಯನ್ನು ದೀಪಸ್ತಂಭಕ್ಕೆ ಹೋಲಿಸಲಾಗಿದೆ ಪ್ರಕ. 1:20 ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ನಿಂತಿದ್ದಾನೆ. ದೀಪಸ್ತಂಭವು ಗುಡಾರದಲ್ಲಿದೆ. ವಿಮೋ. 25:31–37 ಜೆಕೆ. 4:2, ಪ್ರಕ. 1:11 ಯೋಹಾನನು ದರ್ಶನ ನೋಡಿದನು. ಪ್ರಕ. 1:2,11–19 ಕರ್ತನು ಎಫೆಸ, ಸ್ಮುರ್ನ, ಪೆರ್ಗಮ, ಥುವತ್ತೈರ, ಸಾರ್ದಿಸಿ, ಫಿಲದೆಲ್ಫಿಯ, ಲವೊದಿಕೀಯ ಎಂಬ 7 ಸಭೆಗಳಿಗೆ ನೋಡಿದ ದರ್ಶನವನ್ನು ಬರೆದು ಕಳುಹಿಸಲು ಹೇಳಿದನು (ಈ ಏಳು ಸಭೆಗಳು ಈಗಿನ ಟರ್ಕಿ ದೇಶದಲ್ಲಿದ್ದವು).

**ಪುನರುತ್ಥಾನನಾದ ಕ್ರಿಸ್ತನ ವೇಷಧಾರಣೆ :** (ಪ್ರಕ. 1:12–13).

1. ನಿಲುವಂಗಿ ತೊಟ್ಟಿದ್ದಾನೆ –ಯಾಜಕನವೇಷ (ವಿಮೋ. 28:4).
2. ಎದೆಗೆ ಚಿನ್ನದ ಪಟ್ಟಿ ಧರಿಸಿದ್ದಾನೆ – ಅರಸನ ವೇಷ (1 ಸಮು. 19:4).
3. ಊಫಜಿನ ಅಪರಂಜಿ ಪಟ್ಟಿ – ಪ್ರವಾದಿಯ ವೇಷ ದಾನಿ. 10:5 ಸ್ನಾನಿಕ ಯೋಹಾನನು ಸೊಂಟಕ್ಕೆ ಪಟ್ಟಿಯನ್ನು ಕಟ್ಟಿದ್ದನು.

**ಪ್ರಕ. 1:14–16 ಪುನರುತ್ಥಾನ ಕ್ರಿಸ್ತನ ಶರೀರ**

1) ಕೂದಲು – ಬಿಳಿ ಉಣ್ಣೆಯಂತೆ ಹಿಮದಂತೆ ಬೆಳ್ಳಗೆ ದಾನಿ. 7:9 ರಲ್ಲಿ ಇದೇ ರೀತಿಯಾಗಿ ಕಾಣುತ್ತಿದ್ದಾನೆ.

2) ಎರಡು ವಿಷಯುವನ್ನು ಸೂಚಿಸುತ್ತದೆ. ಎ) ನಿತ್ಯವಾದ ಅಸ್ಥಿತ್ವ ಬಿ) ಪವಿತ್ರತೆ.

2) **ಅವನ ಕಣ್ಣು :** ಬೆಂಕಿಯ ಉರಿಯಂತೆ ದಾನಿ. 10:6 ಉರಿಯುವ ಪಂಜಿನಂತೆ ನೀಗಿನಿಗಿಸಿದವು.

ಕೀರ್ತ. 139:7 ನಮ್ಮ ಪತ್ರಿಯೊಂದು ವಿಷಯವನ್ನು ನೋಡುತ್ತಾನೆ.

3) **ಆತನ ಪಾದ :** ಕುಲುಮೆಯಲ್ಲಿ ಹಾಕಿದ ತಾಮ್ರ ದಾನಿ. 10:6 ಬೆಳಗಿದ ತಾಮ್ರದಂತೆ

1. ತಾಮ್ರವು ಶಕ್ತಿಗೆ ಉದಾಹರಣೆಯಾಗಿದೆ.
2. ಮಿನುಗುವುದು ವೇಗಕ್ಕೆ ಉದಾಹರಣೆಯಾಗಿದೆ.

ಇದು ಕ್ರಿಸ್ತನ ಶಕ್ತಿ ಹಾಗೂ ಕ್ರಿಯೆಗಳ ವೇಗವನ್ನು ಸೂಚಿಸುತ್ತದೆ.

**4) ಆತನ ಶಬ್ಧ :** ಜಲಪ್ರವಾಹದಂತೆ ಯೆಹೆ. 43:2, 1 ಅರಸು. 19:12 ಮಂದ ಮಾರುತದ ಶಬ್ದ. ಅಂದರೆ ಆತನ ಶಬ್ದಕ್ಕೆ ಶಕ್ತಿ ಇದೆ ಎಂದು ಅರ್ಥ.

1. ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವು (ಇಬ್ರಿ. 11:3).
2. ದೇವರ ವಾಕ್ಯವು ಕಾರ್ಯಸಾಧಕವಾದದ್ದು (ಇಬ್ರಿ. 4:12).
3. ಗುಣಪಡಿಸುತ್ತದೆ (ಕೀರ್ತ. 107:20).
4. ದಾರಿಯಲ್ಲಿ ನಡೆಸುತ್ತದೆ (ಕೀರ್ತ. 119:105).
5. ಜ್ಞಾನೋದಯವನ್ನುಂಟು ಮಾಡುತ್ತದೆ (ಕೀರ್ತ. 119:130).
6. ಬಿಡುಗಡೆ ಕೊಡುತ್ತದೆ (ಯೋಹಾ. 8:31–32).
7. ಶುದ್ಧಿಮಾಡುತ್ತದೆ (ಯೋಹಾ. 15:1–3).
8. ನಂಬಿಕೆಯನ್ನುಂಟು ಮಾಡುತ್ತದೆ (ರೋಮ. 10:17).
9. ಹೊಸದಾಗಿ ಹುಟ್ಟುವಂತೆ ಮಾಡುತ್ತದೆ (ಯಾಕೋ. 1:18, 1 ಪೇತ್ರ. 1:23).
10. ನಂಬುವವರ ಒಳಗೆ ಬಲವಾಗಿ ಕಾರ್ಯಮಾಡುತ್ತದೆ. (1 ಥೆಸ. 2:13).

5) ಕೈಯಲ್ಲಿ 7 ನಕ್ಷತ್ರ – 7 ಸಭೆ, 7 ದೂತರು – ಅಂದರೆ ಸಭಾಪಾಲಕರು ಅಂದರೆ ಆತನ ಕೈಯಲ್ಲಿ 7 ಸಭೆಯ ಪಾಲಕರು ಸುರಕ್ಷಿತರು ಎಂದು ಅರ್ಥ.

6) ಆತನ ಬಾಯಿ :– ಹದವಾದ ಕತ್ತಿ (ಇಬ್ರಿ. 4:12) ದೇವರ ವಾಕ್ಯ.

**ಸರ್ವಭೂನಿವಾಸಿಗಳು ನಿನಗೆ ಎರಗಿ ಭಜಿಸುತ್ತಾ ನಿನ್ನ ನಾಮವನ್ನು ಕೀರ್ತಿಸುವರು**
**(ಕೀರ್ತ. 66:4).**

7) ಆತನ ಮುಖ :– ಪ್ರಕಾಶಿಸುವ ಸೂರ್ಯನಂತೆ. ಯೋಹಾನನು ಇದನ್ನು ರೂಪಾಂತರ ಬೆಟ್ಟದಲ್ಲಿ ನೋಡಿದ್ದನು (ಮತ್ತಾ. 17:2, ಲೂಕ. 9:29).

ಪ್ರಕ. 1:17 ಯೋಹಾನನು ಪುನರುತ್ಥಾನ ಕ್ರಿಸ್ತನ ನಿಜ ಸ್ವರೂಪವನ್ನು ಕಂಡಾಗ ಸತ್ತವನ ಹಾಗೆ ಬಿದ್ದನು.

ಎ) ಯೋಹಾನನು ಯೇಸುವಿಗೆ ಶಿಷ್ಯನಾಗುವ ಮುಂಚೆ ಪರಿಚಿತನು.

ಬಿ) ನಂತರ ಶಿಷ್ಯನಾದನು.

ಸಿ) 64 ವರ್ಷಗಳ ನಂತರ ದೇವಸ್ವರೂಪನಾದ ಕ್ರಿಸ್ತನನ್ನು ಕಂಡಾಗ ಅಡ್ಡಬಿದ್ದನು.

ಡಿ) ಯೋಹಾನನು ಕ್ರಿಸ್ತನನ್ನು ನೀನು ಯಾರು ಎಂದು ಕೇಳಲಿಲ್ಲ ಆತನೇ ಯೋಹಾನನಿಗೆ ತನ್ನನ್ನು ಈ ರೀತಿ ಪರಿಚಯಪಡಿಸಿದ್ದು.

ಇ) ನಾನು ಮೊದಲನೆಯವನೂ ಕಡೆಯವನೂ ಸದಾಜೀವಿಸುವವನೂ.

ಎಫ್) ಬಲಗೈಯನ್ನಿಟ್ಟು ಯೋಹಾನನಿಗೆ ಭಯಪಡಬೇಡ, ಯೋಹಾನನು ಅನೇಕ ಸಾರಿ ಕೇಳಿದ ಶಬ್ದವನ್ನು ತಿರುಗಿ ಕೇಳಿದನು.

ಪ್ರಕ. 2:17 ಎರಡನೇ ಅಧ್ಯಾಯ ಎಫೆಸ ಸಭೆ :– ಎಫೆಸ ಅಂದರೆ –ಸೂಕ್ಷ್ಮತೆಯಿಲ್ಲದ ಸಭೆ (ಸಡಿಲವಾದ ಸಭೆ).

ಸಭೆಯ ಕಾಲವಧಿ ಪಂಚಶತ್ತಮ ದಿನದಿಂದ ಕ್ರಿ.ಶ. 100ರವರೆಗೆ

ಎಫೆಸ – ಆಗ್ರಹಿಸತಕ್ಕದ್ದು.

ಅನುಭವ – ಬಿತ್ತುವ ಕಾಲ (ಸುವಾರ್ತಿಕರಣ)

ಸಾಮ್ಯ ಬಿತ್ತುವವನ ಸಾಮ್ಯ.

ಪ್ರಕಟಣೆ ಪುಸ್ತಕದಲ್ಲಿರುವ ಏಳು ಸಭೆಗಳ ಸ್ಥಾನ :– ಭೂಮಿಶಾಸ್ತ್ರ ಪರವಾಗಿ ಪತ್ಮೋಸ್ ದ್ವೀಪದಿಂದ ಒಂದು ರೋಮನ್ ರಸ್ತೆಯ ಬದಿಗಳಲ್ಲಿ ಈ 7 ಸ್ಥಳಗಳಿತ್ತು. ಪ್ರಾರಂಭದಲ್ಲಿ ಎಫೆಸ ಅಲ್ಲಿಂದ 30 ಮೈಲಿ ಉತ್ತರದಿಕ್ಕಿಗೆ ಸ್ಮುರ್ನ ನಂತರ ಪೆರ್ಗಮಕ್ಕೆ ಬರಬಹುದು. ನಂತರ ಉತ್ತರ ದಕ್ಷಿಣ ಪ್ರಯಾಣಿಸಿ ಥುವತೈರಾ ಸಾರ್ದಿಸ್ ಫಿಲದೆಲ್ಫಿಯ ಮುಂತಾದ ಪಟ್ಟಣಗಳಿಗೆ ಬರಬಹುದು. ಸಭೆಗಳ ಸಂದೇಶದ ಕ್ರಮಾನುಸಾರ ಸ್ಥಿತಿಯೂ ಆಗಿದೆ.

ಈ ಸಂದೇಶ ಬರೆಯುವ ಕಾಲದಲ್ಲಿ ಬಿಥುನ್ಯ, ಮೆಕದೋನ್ಯ, ಗ್ರೀಸ್ ಮುಂತಾದ ಪಟ್ಟಣಗಳಲ್ಲಿ ಸಣ್ಣ ಸಣ್ಣ ಗುಂಪುಗಳು ಆರಾಧನೆಗೆ ಸೇರಿಬರುತ್ತಿದ್ದರು. ಆದರೆ ಕೇವಲ 7 ಸಭೆಗಳನ್ನು ಮಾತ್ರ ಆರಿಸಿದ್ದೇಕೆ ಎಂಬ ಪ್ರಶ್ನೆ ಅನೇಕರಿಗೆ ಕಾಡುತ್ತಿದೆ.

ಪೌಲನ ಪತ್ರಿಕೆಗಳಲ್ಲಿ ಪ್ರತಿಯೊಂದು ಸಭೆಗೆ ಬರೆದನಾದರೂ ಇವೆಲ್ಲವೂ ಕ್ರಿಸ್ತನ ಸಾರ್ವತಿಕ ಸಭೆಗಿರುವ ಸಂದೇಶವಾಗಿದೆ. ಅದರಂತೆ 7 ಸಭೆಗಳ ಸಂದೇಶವೂ ಕೂಡ ಕ್ರಿಸ್ತನ ಸಾರ್ವತಿಕ ಸಭೆಗಿರುವ ಸಂದೇಶವಾಗಿದೆ (ಪ್ರಕ. 2:23).

ಈ ಸಂದೇಶಗಳು 4 ರೀತಿಯಲ್ಲಿವೆ.

1) ಪ್ರಾದೇಶಿಕ ಮಟ್ಟದಲ್ಲಿ : ಪ್ರಾದೇಶಿಕ ಸಭೆಗಳ ಚರಿತ್ರೆ, ಆತ್ಮೀಕ ಅನುಭವ, ಗುಣಗಳು ಜಯ ಪಜಯಗಳು, ಶಿಕ್ಷೆ ಪ್ರತಿಫಲ, ಇವುಗಳು ಬೇರ್ಪಡಿಸಿ ಕಲಿಯಬೇಕು.

2) ವ್ಯಕಿಗತ ರೀತಿಯಲ್ಲಿ : ಈ ಸಂದೇಶಗಳು ನಮ್ಮೊಡನೆ ವ್ಯಕ್ತಿಗತ ರೀತಿಯಲ್ಲಿ ಮಾತಾನಾಡುತ್ತವೆ. ಉದಾ: ಕಿವಿಯುಳ್ಳವನು ಕೇಳಲಿ, ನೀನು ಎಲ್ಲಿಂದ ಬಿದ್ದಿದ್ದೀಯೋ

3) ಸಭಾ ಚರಿತ್ರೆಯ ಮಟ್ಟದಲ್ಲಿ :– ಒಂದನೇ ಶತಮಾನದ ಸಭಾಕಾಲ ಮೊದಲುಗೊಂಡು ಒಯ್ಯಲ್ಪಡುವ ತನಕವಿರುವ ಸಭಾಕಾಲವನ್ನು 7 ರೀತಿಯಾಗಿ ವಿಭಾಗಿಸಿ ಕಲಿಯಬಹುದು.

1. ಅಪೋಸ್ತಲರ ಕಾಲದಿಂದ ಕ್ರಿ.ಶ 312ರವರೆಗೆ
2. ಕ್ರಿ.ಶ 313 ರಿಂದ 5ನೇ ಶತಮಾನದವರೆಗೆ
3. 5ನೇ ಶತಮಾನದಿಂದ 15ನೇ ಶತಮಾನದವರೆಗೆ
4. 15ನೇ ಶತಮಾನದಿಂದ ನವೀಕರಣದವರೆಗೆ
5. ನವೀಕರಣದ ಸಮಯದಿಂದ ಬದಲಾವಣೆಯವರೆಗೆ (ರೋಮ. 4:5–6).
6. ಬದಲಾವಣೆಯ ಸಮಯದಿಂದ ಉಜ್ಜೀವನದ ಸಮಯದವರೆಗೆ

ಉಜ್ಜೀವನದ ಸಮಯದಿಂದ ಸಭೆ ಎತ್ತಲ್ಪಡುವವರೆಗೆ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ನೀತಿವಂತರಾದರೋ ದೇವರ ಸನ್ನಿಧಿಯಲ್ಲಿ ಹರ್ಷಿಸುವರು; ಉಲ್ಲಾಸಿಸುವರು, ಆನಂದಧ್ವನಿಮಾಡುವರು**
**(ಕೀರ್ತ. 68:3).**

# ಎಚ್ಚರವಾಗಿರು

**ವಯಸ್ಕರ ಸ್ವರ**

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

'ಶೋಧನೆ' ಬರುವುದು ಪಾಪವಲ್ಲ, ಆದರೆ ಶೋಧನೆಯಲ್ಲಿ ಬೀಳುವುದೇ ಪಾಪವಾಗಿದೆ. ನಮ್ಮ ಕರ್ತನಾದ ಯೇಸು 'ಸರ್ವ ವಿಷಯದಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು. ಪಾಪ ಮಾತ್ರ ಮಾಡಲಿಲ್ಲ" (ಇಬ್ರಿ. 4:15). ನಾವು ಶೋಧನೆಗೆ ಬಿದ್ದು ಪಾಪ ಮಾಡುವಾಗ ಸೈತಾನನ್ನು ಹಿಂಬಾಲಿಸುವವರಾಗುತ್ತೇವೆ. ಹಾಗೂ ಕ್ರಿಸ್ತನಿಗೆ ದ್ರೋಹ ಬಗೆಯುವವರಾಗಿರುತ್ತೇವೆ. ಸತ್ಯವೇದ ಹೇಳುತ್ತದೆ, 'ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವುದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವುದಕ್ಕೆ ಶಕ್ತನಾಗಿದ್ದಾನೆ (ಇಬ್ರಿ. 2:18). ದೇವರು ಶೋಧಗೆ ನಾವು ಬೀಳದಂತೆ ತಪ್ಪಿಸಲು ಶಕ್ತನಾಗಿದ್ದಾನೆ. ಆದರೆ ದೇವರಿಗೆ ನಮ್ಮ ನಿಮ್ಮ ಸಹಕಾರ ಬೇಕಾಗಿದೆ. ಪ್ರಾರ್ಥನೆ ಜೀವಿತ ಇಲ್ಲದವರು ಬೇಗನೆ ಶೋಧನೆಗೆ ಒಳಗಾಗುವರು. ಅದಕ್ಕಾಗಿ ಯೇಸು ಹೇಳಿದರು ಶೋಧನೆಗೆ ಒಳಗಾಗದೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ (ಮತ್ತಾ. 26:41). ಯೇಸು ತನ್ನ ಶಿಷ್ಯರಿಗೆ ಶೋಧನೆ ಬಾರದಂತೆ ಪ್ರಾರ್ಥಿಸಿರಿ ಎಂದು ತಿಳಿಸಲಿಲ್ಲ. ಆದರೆ ಬಂದ ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸಲು ಪ್ರಾರ್ಥಿಸಿರಿ ಎಂದು ಹೇಳಿದರು (ಮತ್ತಾ. 6:13).

3) ಸುಳ್ಳು ಬೋಧನೆಗಳಿಗೆ ಎಚ್ಚರವಾಗಿರು : (ಕೊಲೊ. 2:8). ಸತ್ಯವೇದವು ಹೇಳುತ್ತದೆ, "ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧನೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ" (ಕೊಲೊ. 2:8). ತಮ್ಮ ಬೋಧನೆಗಳನ್ನು ವ್ಯತ್ಯಾಸವಾಡಿ ನಂಬಿಕೆಯನ್ನು ಕೆಡಿಸುವ ವ್ಯತ್ಯಾಸ ಬೋಧನೆಗಳಿಗೆ ಎಚ್ಚರವಾಗಿರಬೇಕು. ಪೌಲನು ದು:ಖದಿಂದ ಬರೆಯುವವನಾಗಿದ್ದಾನೆ. ಅ.ಕೃ. 20:30–31 ವ್ಯತ್ಯಾಸ ಬೋಧನೆಯಿಂದ ಎಷ್ಟೋ ಆತ್ಮೀಕವಾಗಿರುವ ವಿಶ್ವಾಸಿಗಳು ಕೆಡಲ್ಪಡುತ್ತಾರೆ. "ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಆ ಹರಟೆಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವುದನ್ನೇ ಕಾಪಾಡು" (1 ತಿಮೊ. 6:20). ಎಷ್ಟೋ ಬೋಧಕರಾದವರು ಸಹ ಪವಿತ್ರಾತ್ಮನನ್ನು, ಅನ್ಯಭಾಷೆ, ಪ್ರವಾದನೆ ಹಾಗೂ ರೋಗ ಸೌಖ್ಯತೆಯನ್ನು ನಂಬಂದಿರುವಾಗ ಅದನ್ನು ಜನರಿಗೆ ಬೋಧಿಸಲು ಸಾಧ್ಯನಾ? ಅನ್ಯಭಾಷೆಯನ್ನಾಡುವಾಗ ಗೇಲಿಮಾಡಿ ನಿಂದಿಸುವ ವ್ಯಕ್ತಿಗಳು ಖಂಡಿತ ಅಭಿಷೇಕವನ್ನು ಹೊಂದಲು ಸಾಧ್ಯವಿಲ್ಲ.

"ಮನುಷ್ಯರು ಮಾಡುವ ಪ್ರತಿಯೊಂದು ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವದು; ಆದರೆ ಪವಿತ್ರಾತ್ಮ ದೂಷಣೆಗೆ ಕ್ಷಮಾಪಣೆಯಿಲ್ಲ" (ಮತ್ತಾ. 12:31).

ಪ್ರಿಯ ದೇವ ಮಗುವೇ, ಸತ್ಯ ಬೋಧನೆಗೆ ದೃಢವಾಗಿರಿ. ಈ ದಿನಮಾನಗಳಲ್ಲಿ ಜನರು ಸ್ವಸ್ಥ ಬೋಧನೆಯನ್ನು ನಡಿಸಲಾರದ ಕಾಲವಾಗಿದೆ. "ಹೀಗಿರುವದರಿಂದ ಸಹೋದರರೇ, ದೃಢವಾಗಿ ನಿಲ್ಲಿರಿ. ನಾವು ಮಾತಿನಿಂದಾಗಲಿ ಪತ್ರಿಕೆಯಿಂದಾಗಲಿ ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ" (2 ಥೆಸ. 2:15).

4) ಕರ್ತನ ಬರೋಣಕ್ಕೆ ಎಚ್ಚರವಾಗಿರು : ಸತ್ಯವೇದದಲ್ಲಿ ಇನ್ನೊಂದು ಮುಖ್ಯವಾದ ಎಚ್ಚರಿಕೆಯನ್ನು ಕರ್ತನ ಬರೋಣದ ಕುರಿತಾಗಿ ಬರೆಯಲ್ಪಟ್ಟಿರುತ್ತದೆ. ಹೊಸ ಒಡಂಬಡಿಕೆಯ 260 ಅಧ್ಯಾಯಗಳಲ್ಲಿ 318 ಸಾರಿ ಕ್ರಿಸ್ತನ ಬರೋಣದ ಕುರಿತು ಬರೆಯಲ್ಪಟ್ಟಿರುತ್ತದೆ. ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಪಕ್ಕನೆ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವದು. ಆದರೆ ಬರುವದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ (ಲೂಕ. 21:25–36). ಕರ್ತನ ಬರೋಣವನ್ನು ಕಳ್ಳನ ಬರೋಣಕ್ಕೆ ಹೋಲಿಸಲಾಗಿದೆ. ಕಳ್ಳನು ಬರುವ ಜಾವ ಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರಿಕೆಯಿಂದ ಸಿದ್ಧತೆಮಾಡಿಕೊಳ್ಳಬಹುದು. ಆದರೆ ಕಳ್ಳನು ಬರುವಾಗ ತಿಳಿಯದ ಹಾಗೆ ಬಂದು ದೋಚಿಕೊಂಡು ಹೋಗುವನು.

ನನ್ನ ಮಾತುಗಳೂ ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ

(ಕೀರ್ತ. 19:14).

ಅದೇ ಪ್ರಕಾರ ಕರ್ತನು ಬರೋಣ ನೆನೆಸದ ಗಳಿಗೆಯಲ್ಲಿ ಇರುವುದರಿಂದ ಎಚ್ಚರವಾಗಿರಬೇಕು. "ಆದಕಾರಣ ಆ ದಿನವಾದರೂ, ಗಳಿಗೆಯಾದೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ" (ಮತ್ತಾ. 25:13).

ದೇವ ಮಗುವೇ, ಕರ್ತನ ಬರುವಿಕೆಗಾಗಿ ಸಿದ್ಧತೆಮಾಡಿಕೊಂಡು ಎಚ್ಚರವಾಗಿರು ಇಲ್ಲದಿದ್ದರೆ ನೀನು ಕೈಬಿಡಲ್ಪಡುವಿ.

ಸತ್ಯವೇದವು ತಿಳಿಸುತ್ತದೆ, ಸಭೆ ಸೇರುವುದನ್ನು ಬಿಟ್ಟು ಬಿಡಬೇಡರಿ. ಕರ್ತನ ಬರೋಣದ ದಿನಗಳು ಸಮೀಪವಿರುವುದರಿಂದ ಇನ್ನಷ್ಟು ಮಾಡಿರಿ (ಇಬ್ರಿ. 10:25). ಇಂದು ಅನೇಕರು ಸರಿಯಾಗಿ ಭಾನುವಾರ ಸಭೆಗೆ ಆರಾಧನೆಗೆ ಬರುವುದನ್ನು ಬಿಟ್ಟು ಬಿಟ್ಟು ಮದುವೆ, ಮುಂಜಿ, ಪಾರ್ಟಿ ಎಂದು ಹೊಟ್ಟೆ ತುಂಬಿಸಲು ಅಲೆದಾಡುತ್ತಿರುತ್ತಾರೆ. ಪ್ರಿಯನೇ ಕ್ರಿಸ್ತನು ಬರುವುದಾದರೆ ನೀನು ಆತನ ಮುಂದೆ ನಿಂತುಕೊಳ್ಳಲು ಸಿದ್ಧವಾಗಿರುವೆಯಾ? ಇಂದು ಸಭೆಯ ಬೋಧಕರು ಒತ್ತಾಯಪಡಿಸಿ ಆರಾಧನೆ ತಪ್ಪಿಸಿಕೊಳ್ಳಬೇಡಿರಿ ಎಂದು ಗಂಟಲು ಆರಿ ಹೋಗುವ ಹಾಗೆ ಕೂಗಿದರೂ ಕೇಳದ ಸ್ಥಿತಿಯಲ್ಲಿ ನೀನಿರುವಿಯಾದರೆ ಎಚ್ಚರಿಕೆ ವಹಿಸು. ಇಂದೇ ತೀರ್ಮಾನ ಕೈಗೊಳ್ಳು . ಕರ್ತನು ತಾನೇ ಹೇಳುತ್ತಾನೆ, "ಇಗೋ ಬೇಗನೇ ಬರುತ್ತೇನೆ; ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ" (ಪ್ರಕ. 22:12). ಪ್ರಿಯನೇ ಕರ್ತನ ಬರೋಣಕ್ಕೆ ಎಚ್ಚರವಾಗಿರು. ಆ ಮೇಲೆ ಪಶ್ಚಾತ್ತಾಪ ಪಡದಿರು.

ಮುಂದುವರಿಯುವದು.....

**ಪಾ|| ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

---

## ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ಹಾಗೂ ನಿಮ್ಮ ಮಕ್ಕಳ ಹುಟ್ಟಿದ ದಿನವನ್ನು ನಮ್ಮ ಅನಾಥಶ್ರಮದ ನಿವಾಸಿಗಳೊಂದಿಗೆ ಆಚರಿಸುವೀರಾ?

**ಹಾಗಾದರೆ ನಿಮಗೆ ಸ್ವಾಗತ 15,000/–**

* ನಿಮ್ಮ ಹುಟ್ಟಿದ ದಿನ.
* ನಿಮ್ಮ ಮಕ್ಕಳ ಹುಟ್ಟಿದ ದಿನ.
* ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನ.
* ನಿಮ್ಮ ಮದುವೆ ದಿನ.

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

* * * * *

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

* ಪ್ರಾರ್ಥನೆ     * ಆರ್ಥಿಕ ಸಹಾಯ

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

ನಮ್ಮ ಪೂರ್ವಿಕರು ನಿನ್ನಲ್ಲಿ ಭರವಸವಿಟ್ಟರು; ನಿನ್ನನ್ನು ನಂಬಿ ಉದ್ಧಾರವಾದರು
(ಕೀರ್ತ. 22:4).

# ದೇವಾಲಯದ ಪುನ: ಸ್ಥಾಪನೆ

## (ಪ್ರೋತ್ಸಾಹ)

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**"ನಾನು ನಿಮಗೆ ಪ್ರಮಾಣವಾಗಿ ಕೊಟ್ಟ ಮಾತನ್ನು [ನೇರವೇರಿಸುವೆನು]; ನನ್ನ ಆತ್ಮನು ನಿಮ್ಮ ಮಧ್ಯದಲ್ಲಿ ನೆಲೆಗೊಂಡಿರುವನು; ಹೆದರಬೇಡಿರಿ"** (ಹಗ್ಗಾ. 2:5).

ಕರ್ತನಲ್ಲಿ ಪ್ರಿಯರೇ, ಹಗ್ಗಾಯನ ಪ್ರವಾದನ ಗ್ರಂಥವನ್ನು ಧ್ಯಾನಿಸುವಾಗ ಓಬದ್ಯನ ಪುಸ್ತಕವನ್ನು ಹೊರತು ಪಡಿಸಿದರೆ ಈ ಪುಸ್ತಕವು ಹಳೇ ಒಡಂಬಡಿಕೆಯ 2ನೇ ಅತಿ ಚಿಕ್ಕ ಪುಸ್ತಕವಾಗಿದ್ದರೂ ಇದು ಸತ್ಯವೇದದ 37ನೇ ಪುಸ್ತಕವಾಗಿದ್ದು 2 ಅಧ್ಯಾಯುಗಳನ್ನೊಳಗೊಂಡು 38 ವಾಕ್ಯಗಳಿಂದ ಕೂಡಿದಾಗಿದೆ. ಹಗ್ಗಾಯನೇ ಇದರ ಲೇಖಕನಾಗಿದ್ದು ಅವನ ಹೆಸರಿಗೆ ಹಬ್ಬ (ಉತ್ಸವ) ಎಂಬ ಅರ್ಥವಿದೆ. ಇತನು ಯಾವುದಾದರೂ ಹಬ್ಬದ ದಿನದಲ್ಲಿ ಜನಿಸಿರಬಹುದಷ್ಟೇ. ಇತನ ಕುಟುಂಬದ ಬಗ್ಗೆ ಹೆಚ್ಚೇನೂ ನಮಗೆ ತಿಳಿಯದಿದ್ದರೂ 1:1ರಲ್ಲಿ ತನ್ನನ್ನು "ಪ್ರವಾದಿಯಾದ ಹಗ್ಗಾಯನು ಎಂದು ಗುರುತಿಸಿಕೊಂಡಿದ್ದಾನೆ.

ಯೆಹೂದ್ಯರು ಬಾಬೆಲ್ ಸೆರೆಯಿಂದ ಯೆರೂಸಲೇಮಿಗೆ ಹಿಂತಿರುಗಿ ಬಂದ ನಂತರ ಮೂರು ಪ್ರವಾದಿಗಳು ಪ್ರವಾದಿಸಿದ್ದಾರೆ. ಅವರಲ್ಲಿ ಹಗ್ಗಾಯನು ಒಬ್ಬನು. (ಇನ್ನಿಬ್ಬರು ಜೆಕರ್ಯ, ಮಲಾಕಿ) ಇತನು ಪ್ರವಾದನಾ ಸೇವೆಯನ್ನು ಮಾಡಿದ ಕಾಲದಲ್ಲಿ 70ರಿಂದ 80 ವಯಸ್ಸಿನ ವೃದ್ಧನು ಎಂದು ನಂಬುತ್ತಾರೆ (2:3). ಜೆಕರ್ಯನಿಗಿಂತ 2 ತಿಂಗಳು ಮುಂಚೆ ಸೇವೆಯನ್ನು ಪ್ರಾರಂಭಿಸಿದನು.

ಕ್ರಿ.ಪೂ. 538ರಲ್ಲಿ ಪಾರಸಿಯ ಅರಸನಾದ ಕೋರೇಷನು ಯೆಹೂದ್ಯರನ್ನು ಸ್ವದೇಶಕ್ಕೆ ಹಿಂತಿರುಗಲು ಮತ್ತು ದೇವಾಲಯವನ್ನು ಕಟ್ಟಲು ಅನುಮತಿಯೊಂದಿಗೆ ಆಜ್ಞೆ ಹೊರಡಿಸಿದನು. ಕ್ರಿ.ಪೂ. 536ರಲ್ಲಿ ಜೆರುಬ್ಬಾಬೇಲನ ಮತ್ತು ಮಹಾಯಾಜಕನಾದ ಯೆಹೋಶುವನ ನೇತೃತ್ವದಲ್ಲಿ 42,360 ಯೆಹೂದ್ಯರು ಬಾಬೆಲಿನಿಂದ ಯೆರೂಸಲೇಮಿಗೆ ಹಿಂತಿರುಗಿ ಬರುವಾಗ ಆ ಗುಂಪಿನಲ್ಲಿ ಒಬ್ಬನಾಗಿದ್ದನು ಹಗ್ಗಾಯನು (ಎಜ್ರ. 1:2–4 ಹೋಲಿಸಿ ಯೆಶಾ. 44:28) ಆ ಸಮಯದಲ್ಲಿ ಅವರು ಹೊಸದಾಗಿ ಕಟ್ಟಿದ ಯಜ್ಞವೇದಿಯ ಮೇಲೆ ಲೇವಿಯ ನಿಯಮದ ಪ್ರಕಾರ ಸರ್ವಾಂಗ ಹೋಮ ಅರ್ಪಿಸಲಾಯಿತು (ಎಜ್ರ. 3:1–6). ತಿರುಗಿ ಬರೋಣದ ಎರಡನೇ ವರ್ಷ ದೇವಾಲಯದ ಅಸ್ತಿವಾರವನ್ನು ಹಾಕಲಾಯಿತು (ಎಜ್ರ. 3:8–13, 5:16). ಆದರೆ ಸಮಾರ್ಯದವರ ಅಡ್ಡಿಪಡಿಸುವಿಕೆ ಮತ್ತು ಪರ್ಶಿಯನ್ನರ ಒತ್ತಾಯದಿಂದ 16 ವರ್ಷಗಳವರೆಗೆ ಕೆಲಸ ನಿಂತು ಹೋಯಿತು.

ಈ ಕಾಲದಲ್ಲಿ ಯೆಹೂದ್ಯರು ದೇವಾಲಯದ ಕೆಲಸಕ್ಕಾಗಿ ಉತ್ಸಾಹ ತೋರಲಿಲ್ಲ. ಅವರು ತಮ್ಮ ವ್ಯವಸಾಯ ಮತ್ತು ಇತರ ಕಾರ್ಯಗಳಲ್ಲಿ ಗಮನ ಕೊಡುತ್ತಿದ್ದರು. ಅವರು ಸುಂದರವಾದ ಮನೆಗಳನ್ನು ಕಟ್ಟಿ ಸುಖವಾಗಿ ವಾಸಿಸಿದರು. ದೇವಾಲಯವನ್ನು ಪೂರ್ಣಗೊಳಿಸುವ ಬಯಕೆ ಯಾರಲ್ಲೂ ಇರಲಿಲ್ಲ. ಈ ಸಂದರ್ಭದಲ್ಲಿ ದೇವಾಲಯದ ಕೆಲಸ ಪೂರ್ಣಗೊಳಿಸಲು ಜನರಲ್ಲಿ ಆಸಕ್ತಿ ತುಂಬಲು ದೇವರು ಪ್ರವಾದಿಯಾದ ಹಗ್ಗಾಯನನ್ನು ಎಬ್ಬಿಸಿದನು. ಕ್ರಿ.ಪೂ. 520ರಲ್ಲಿ ಪ್ರವಾದನಾ ಸೇವೆಯನ್ನು ಪ್ರಾರಂಭಿಸಿದನು. ಹಗ್ಗಾಯನು ಮೂರು ತಿಂಗಳು 24 ದಿವಸ ಪ್ರವಾದಿಸಿದನು (1:1–15, 2:1,10,20).

ಸೆರೆಯಿಂದ ಹಿಂತಿರುಗಿ ಬಂದ ಯೆಹೂದ್ಯರು ನಂತರ ವಿಗ್ರಹಾರಾಧಕರಾಗಿರಲಿಲ್ಲ. ತಮ್ಮ ಪಿತೃಗಳ ವಿಗ್ರಹಾರಾಧನೆಯ ಮೂಲಕ ಉಂಟಾದ ಶೋಧನೆ ಮತ್ತು ಗುಲಾಮತನ ಮಕ್ಕಳಿಗೆ ದೊಡ್ಡ ಪಾಠವಾಗಿತ್ತು. ಆದರೆ ಒಂದು ಹೊಸ ರೋಗ ಹತ್ತಿಕೊಳ್ಳುವ ಪಾಪದ ಹಾಗೆ ಅವರನ್ನು ಹಿಡಿಯಿತು. ಹೋರಾಟಗಳು, ಅಡ್ಡಿಗಳು, ಸಮಸ್ಯೆಗಳು ಬಂದಾಗ ತಮ್ಮ ಸ್ವಂತ ಮಾರ್ಗದಲ್ಲಿ ನಡೆಯಲು ಪ್ರಾರಂಭಿಸಿದರು. ಈ ರೋಗವೇನೆಂದರೆ ದೈವೀಕ ಕಾರ್ಯಗಳಲ್ಲಿ ನಿರಾಸಕ್ತಿಯಾಗಿತ್ತು. ಇಂದಿಗೂ ಕೂಡಾ ಅನೇಕ ದೇವ ಜನರನ್ನು ತಿನ್ನುತ್ತಿರುವ ಮಾರಕವಾದ ಅಂಟು ರೋಗವಾಗಿದೆ.

ಈ ಸಂದರ್ಭದಲ್ಲಿಯೂ ಕೂಡಾ ಕತ್ತಲೆಯಲ್ಲಿ ಪ್ರಕಾಶಿಸುವ ಬೆಳಕಿನೋಪಾದಿಯಲ್ಲಿ ಪ್ರವಾದಿಯಾದ ಹಗ್ಗಾಯನು ಮುಂದೆ ಬಂದನು. 16 ವರ್ಷಗಳು ನಡೆಯದೆ ಇರುವ ದೇವಾಲಯದ ಕೆಲಸವನ್ನು ನೆನೆಸಿ ದೇವರ ಸನ್ನಿಧಿಯಲ್ಲಿ ಮೊರೆಯಿಡುತ್ತಾ ದೇವರೇ, ನಾನು ವೃದ್ಧನಾಗಿದ್ದೇನೆ, ನನ್ನ ಕಣ್ಣುಗಳು ಮುಚ್ಚಲ್ಪಡುವದಕ್ಕಿಂತ ಮುಂಚೆ ಆಲಯದ ಕೆಲಸ ಪೂರ್ಣಗೊಳ್ಳುವದನ್ನು ನೋಡಲು ಸಹಾಯ ಮಾಡು ಎಂದು

**ಆತನು ತಾನು ನೇಮಿಸಿದ ಅರಸನಿಗೋಸ್ಕರ ವಿಶೇಷ ರಕ್ಷಣೆಯನ್ನು ದಯಪಾಲಿಸುವವನಾಗಿದ್ದಾನೆ (ಕೀರ್ತ. 18:50).**

ಪ್ರಾರ್ಥಿಸಿದನು. ಈ ಪ್ರಾರ್ಥನೆ ಕೇಳಿದ ದೇವರು ನಾಯಕನಾದ ಜೆರುಬ್ಬಾಬೇಲನಿಗೂ, ಮಹಾಯಾಜಕನಾದ ಯೆಹೋಶುವನಿಗೂ, ಜನರಿಗೂ ಸಂದೇಶವನ್ನು ತಿಳಿಸಲು ಹಗ್ಗಾಯನನ್ನು ನೇಮಿಸಿದನು.

ಹಗ್ಗಾಯನ ಕುರಿತಾಗಿ ದೇಶದಲ್ಲಿ ಒಳ್ಳೇ ಸಾಕ್ಷಿ ಇತ್ತು. ಎಲ್ಲರೂ ಆತನನ್ನೂ ಗೌರವಿಸುತ್ತಿದ್ದರು. ಆದದರಿಂದಲೇ ತನ್ನ ಆಲೋಚನೆಗಳನ್ನು ಉಪದೇಶಗಳನ್ನು ಯಾಜಕರು ಪ್ರಭುಗಳು, ಸಾಧಾರಣ ಜನರು ಅನುಸರಿಸಿದ್ದರು (1:12) ಮತ್ತು ಸ್ವಂತ ಜನರ ಸ್ಥಿತಿಯನ್ನು ಕೂಡಾ ಪ್ರವಾದಿಯು ಪ್ರಕಟಿಸಿದನು (1:4).

ದೇವಾಲಯದ ತಿರುಗಿ ಕಟ್ಟೋಣಕ್ಕಾಗಿನ ಅವನ 4 ಸಂದೇಶಗಳಲ್ಲಿನ ಶಕ್ತಿಯು ಅಲ್ಪವಲ್ಲ. 25 ಬಾರಿ ಅವನು ತನ್ನ ಸಂದೇಶವನ್ನು ದೇವರಿಂದ ದೊರಕಿದ್ದೇ ಎಂದು ಹೇಳಿದ್ದಾನೆ. ತನ್ನ ಸಂದೇಶಗಳನ್ನು **"ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆಂದು** ಪ್ರಾರಂಭಿಸಿ **"ಇದು ಸೇನಾಧೀಶ್ವರನಾದ ಯೆಹೋವನ ನುಡಿ"** ಎಂದು ಮುಕ್ತಾಯ ಗೊಳಿಸುತ್ತಿದ್ದಾನೆ.

**ಮೊದಲ ಸಂದೇಶ – ದೇವಾಲಯವನ್ನು ತಿರುಗಿಕಟ್ಟಲು ಕರೆ (1:1–15).**

**ಎರಡನೇ ಸಂದೇಶ – ದೇವರ ವಾಗ್ದಾನದಲ್ಲಿ ಧೈರ್ಯತಂದುಕೊಳ್ಳಲು ಕರೆ (2:1–9).**

**ಮೂರನೇ ಸಂದೇಶ – ಜೀವನದಲ್ಲಿ ಶುದ್ಧಿಕರಣಕ್ಕಾಗಿ ಕರೆ (2:10–19).**

**ನಾಲ್ಕನೇ ಸಂದೇಶ – ಮುಂದಣ ನಿರೀಕ್ಷೆಗಾಗಿ ಕರೆ (2:20–23).**

ಅಷ್ಟು ಮಾತ್ರವಲ್ಲ. ತನ್ನ ಸಂದೇಶಗಳಲ್ಲಿ 3 ವಿಷಯಗಳನ್ನು ಪ್ರಾಮುಖ್ಯವಾಗಿ ತಿಳಿಸಿದ್ದಾನೆ.

1) ದೇವರಿಗೆ ಪ್ರಥಮ ಸ್ಥಾನ ಕೊಡುವಾಗ ದೇವರು ತನ್ನವರನ್ನು ಆಶೀರ್ವದಿಸುತ್ತಾನೆ.
2) ದೇವರ ಕಾರ್ಯಗಳಲ್ಲಿ ಅಲಸ್ಯರಾಗಿರಬಾರದು.
3) ನಾಳಿನ ವಾಗ್ದಾನಗಳು ಇಂದಿನ ನಿರೀಕ್ಷೆಯ ಅಸ್ತಿವಾರವಾಗಲಿದೆ.

ಮತ್ತು ಈ ಪುಸ್ತಕದಲ್ಲಿ ಕ್ರಿಸ್ತನು

1) ಆಲಯವನ್ನು ವೈಭವದಿಂದ ತುಂಬಿಸುವನು (2:7–9).
2) ರಾಜ್ಯಗಳ ಸಿಂಹಾಸನಗಳನ್ನು ಕೆಡವುವನೂ (2:22) ಎಂಬುದಾಗಿ.

ಇಲ್ಲಿ ಹಗ್ಗಾಯನು ತನ್ನನ್ನು ಮರೆತವನಾಗಿ ಪರಿಸ್ಥಿತಿಗಳ ಮಧ್ಯದಲ್ಲಿ ತನ್ನ ಮುಪ್ಪಿನ ಪ್ರಾಯದಲ್ಲಿ ಕೂಡಾ ಭಾರವುಳ್ಳವನಾಗಿ ದೇವರ ಕಾರ್ಯಗಳನ್ನು ದೃಷ್ಟಿಸಿದಾಗ ಕರ್ತನು ಪ್ರಜ್ವಲಿಸುವಂತೆ ಮಾಡಿದನು. **"ನೀತಿವಂತರು ಖರ್ಜೂರದ ಮರದಂತೆ ಬೆಳೆಯುವರು; ಲೆಬನೋನಿನ ದೇವದಾರುವೃಕ್ಷದ ಹಾಗೆ ವೃದ್ಧಿಯಾಗುವರು.ಯೆಹೋವನ ಆಲಯದಲ್ಲಿ** [ಸಸಿಗಳಂತೆ] **ನೆಡಲ್ಪಟ್ಟವರು ನಮ್ಮ ದೇವರ ಅಂಗಳದಲ್ಲಿ ಚೆನ್ನಾಗಿ ಬೆಳೆಯುವರು. ಮುಪ್ಪಿನಲ್ಲಿಯೂ ಫಲಿಸುವರು; ಪುಷ್ಟಿಯಾಗಿದ್ದು ಶೋಭಿಸುವರು. ಹೀಗೆ ಅವರು ಯೆಹೋವನ ಸತ್ಯಸಂಧ'ತೆಗೆ ದೃಷ್ಟಾಂತರಾಗಿರುವರು. ಆತನೇ ನನ್ನ ಬಂಡೆಯು; ಆತನು ನಿರ್ವಂಚಕನು"**(ಕೀರ್ತ. 92:12–15). ಸರ್ಕಾರಿ ಕೆಲಸ ಮಾಡುವಾಗ ಇಷ್ಟು ವರ್ಷಗಳ ತನಕ ಮಾತ್ರವೇ ನಿಭಾಯಿಸಬಹುದು ಮತ್ತು ನಿವೃತ್ತಿಯಾಗಬೇಕು ಆದರೆ ದೇವರ ಕೆಲಸದಲ್ಲಿ ನಿವೃತ್ತಿ ಎಂಬುದು ಇಲ್ಲ ಪ್ರಿಯರೇ ಉಸಿರು ನಿಲ್ಲುವರೆಗೆ ಸೇವೆ ಮಾಡುತ್ತಲೇ ಇರಬೇಕು. ದೇವರಿಗೆ ವಯಸ್ಸು ಮುಖ್ಯವಲ್ಲ ಸಮರ್ಪಣೆ ಮುಖ್ಯವಾಗಿದೆ.

* 8 ವರ್ಷದ ಯೋಷಿಯನು – (2 ಪೂರ್ವ. 34ನೇ ಅಧ್ಯಾಯ)
* 80 ವರ್ಷದಲ್ಲಿ ಮೋಶೆಯ ಸೇವೆಯ ಪ್ರಾರಂಭ (ಅ.ಕೃ. 7:22–38).
* 85 ವರ್ಷದ ಕಾಲೇಬನು –(ಯೆಹೋ. 14:10,11,12).
* ಮರಣಕರವಾದ ರೋಗದಲ್ಲಿದ್ದುಕೊಂಡ ಪ್ರವಾದಿಯಾದ ಎಲೀಷನು ಸೇವೆಸಲ್ಲಿಸಿದನು (2 ಅರಸು. 13:15–19).

ಆದುದರಿಂದ ನೀವು ಮಕ್ಕಳಾಗಿದ್ದರೂ, ಯೌವನಸ್ಥರಾಗಿದ್ದರೂ, ಮಧ್ಯಮ ವಯಸ್ಕರಾಗಿದ್ದರೂ, ದಂಪತಿಗಳಾಗಿದ್ದರೂ, ಪ್ರಾಯಸ್ಥರಾಗಿದ್ದರೂ ಸರಿಯೇ ದೇವರ ರಾಜ್ಯಕ್ಕಾಗಿ ನೀತಿಗಾಗಿ ತವಕಪಡುವವರಾಗಿದ್ದರೆ ಹಗ್ಗಾಯನ ಹಾಗೆ, ಅನೇಕ ಅಧಿಕಾರಿಗಳಿಗೆ, ಸೇವಕರುಗಳಿಗೆ, ಜನಾಂಗಕ್ಕೆ, ದೇಶಕ್ಕೆ ಆಶೀರ್ವಾದಕರವಾಗಿ ಮಾರ್ಗದರ್ಶಿಗಳಾಗಿ ಕರ್ತನು ನಿಮ್ಮನ್ನು ಉಪಯೋಗಿಸುತ್ತಾನೆ.

ಕರ್ತನು ತಾನೇ ನಿಮ್ಮೆಲ್ಲರನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

**ತಾನು ಅಭಿಷೇಕಿಸಿದ ದಾವೀದನಿಗೂ ಅವನ ಸಂತತಿಯವರಿಗೂ ಸದಾಕಾಲ ಕೃಪೆಯನ್ನು ಅನುಗ್ರಹಿಸುವವನಾಗಿದ್ದಾನೆ (ಕೀರ್ತ. 18:50).**

# ಪ್ರಶ್ನೋತ್ತರಗಳ ಸ್ವರ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

3) ಒಬ್ಬ ಕ್ರೈಸ್ತ ವಿಶ್ವಾಸಿ ತನ್ನ ಜೀವಮಾನದಲ್ಲಿ ಪವಿತ್ರಾತ್ಮ ಭರಿತನಾಗುತ್ತಾ ಇರುತ್ತಾನೆ. ಒಬ್ಬ ವಿಶ್ವಾಸಿಗೆ ಒಂದು ಸಲ ಪವಿತ್ರಾತ್ಮನ ಸ್ನಾನ ಅಥವಾ ಅಭಿಷೇಕ ಆದ ಮೇಲೆ ಪುನ: ಪುನ: ಅಭಿಷೇಕ ಆಗಲ್ಲ ಯಾಕಂದರೆ ಈಗಾಗಲೇ ಅವನಿಗೆ 2ನೆಯ ಅನುಭವವಾದ ಪವಿತ್ರಾತ್ಮ ಸ್ನಾನ ಅಥವಾ ಅಭಿಷೇಕ ಆಗಿದೆ. ಮೂರನೆಯ ಅನುಭವ ಪ್ರತಿದಿನ ಮೊಬೈಲ್ ಬ್ಯಾಟರಿ ಚಾರ್ಜ್ ಮಾಡುವ ಹಾಗೆ ಪವಿತ್ರಾತ್ಮ ಭರಿತರಾಗುತ್ತಾ ಇರಬೇಕು. (ಅ.ಕೃ. 4:31, 13:52, ಎಫೆ. 5:18).

6) ಪರಿಶುದ್ಧಾತ್ಮನ ಅಭಿಷೇಕದ ಉದ್ದೇಶವೇನು? ಅನೇಕರ ಭಾವನೆ ಪರಿಶುದ್ಧಾತ್ಮನ ಅಭಿಷೇಕ ಬೀಳಲು ಕುಣಿಯಲು ಏಳಲು ಮಾತ್ರ ಎಂದು. ಸಾಯುವವರೆಗೆ ಬೀಳುತ್ತಾ ಏಳುತ್ತಾ ಅದರಲ್ಲೇ ತೃಪ್ತರಾಗಿಬಿಡುತ್ತಾರೆ. ಆದರೆ ನಾವು ಅಜ್ಞಾನಿಗಳಾಗಿರಬಾರದು ದೇವರು ನಮ್ಮನ್ನು ಪರಿಶುದ್ಧಾತ್ಮನಿಂದ ಅಭಿಷೇಕಿಸಲು ಕೆಲವು ಕಾರಣಗಳು ಇವೆ. ಅದನ್ನು ನಾವು ತಿಳಿದುಕೊಳ್ಳಬೇಕು.

1. ಎಲ್ಲವನ್ನು ಉಪದೇಶಿಸಿ ಯೇಸು ಹೇಳಿದ್ದನ್ನು ನೆನಪಿಗೆ ತರುವನು (ಯೋಹಾ. 14:25–26).
2. ಕ್ರಿಸ್ತನ ಕುರಿತು ಸಾಕ್ಷಿ ಹೇಳಲು (ಯೋಹಾ. 15:26–27).
3. ಪಾಪ, ನೀತಿ, ನ್ಯಾಯತೀರ್ಪು ಇವುಗಳ ಕುರಿತು ಅರುಹನ್ನು ಉಂಟುಮಾಡುತ್ತಾನೆ (ಯೋಹಾ. 16:8).
4. ಸಕಲ ವಿಷಯದಲ್ಲಿ ಸತ್ಯಕ್ಕೆ ಸೇರಿಸುತ್ತಾನೆ (ಯೋಹಾ. 11:13).
5. ಮುಂದಾಗುವ ಸಂಗತಿಗಳನ್ನು ತಿಳಿಸುವನು (ಯೋಹಾ. 16:13).
6. ಯೇಸುವನ್ನು ಮಹಿಮೆಪಡಿಸಲು (ಯೋಹಾ. 16:14).
7. ಜಯದ ಜೀವಿತ ಜೀವಿಸಲು (ಅ.ಕೃ. 1:8).
8. ಪರಿಶುದ್ಧಾತ್ಮನು ನಮಗಾಗಿ ಪ್ರಾರ್ಥಿಸಲು (ರೋಮ. 8:26).
9. ದೇವರು ಸಿದ್ಧಮಾಡಿದ್ದನ್ನು ತಿಳಿಸಲು (1 ಕೊರಿ. 2–9–10)

10. ಪವಿತ್ರಾತ್ಮನ ವರಗಳನ್ನು ಹಂಚಿಕೊಡಲು (1 ಕೊರಿ. 12–11).
11. ಬಿಡುಗಡೆ ಮಾಡಲು (2 ಕೊರಿ. 3:17).
12. ಕರ್ತನಾದ ಯೇಸುಕ್ರಿಸ್ತನ ಸಾರೂಪ್ಯಕ್ಕೆ ನಡೆಸಲು (2 ಕೊರಿ. 3:18).
13. ಪವಿತ್ರಾತ್ಮನ ಫಲವನ್ನುಂಟು ಮಾಡಲು (ಗಲಾ. 5:22–23).
14. ನಮ್ಮಲ್ಲಿ ನೂತನ ಸ್ವಭಾವವನ್ನುಂಟು ಮಾಡಲು (ತೀತ. 3:5).

7) ಪರಿಶುದ್ಧಾತ್ಮನ ಅಭಿಷೇಕ ಹೇಗೆ ಹೊಂದಬಹುದು?

1. ಮಾನಸಾಂತರ ಪಟ್ಟು ಕರ್ತನಾದ ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟು ಆತನನ್ನು ಜೀವಿತದ ಒಡೆಯನೂ ರಕ್ಷಕನೂ ಆಗಿ ಅಂಗೀಕರಿಸಬೇಕು (ಅ.ಕೃ. 2:38).
2. ಪ್ರಾರ್ಥಿಸಬೇಕು (ಲೂಕ. 11:13).
3. ಪವಿತ್ರಾತ್ಮನ ಕುರಿತು ದಾಹವಿರಬೇಕು (ಯೋಹಾ. 7:37–39).
4. ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳಬೇಕು.

8) ಹೊಸ ಒಡಂಬಡಿಕೆಯಲ್ಲಿ ಯಾರೆಲ್ಲಾ ಪರಿಶುದ್ಧಾತ್ಮನ ಅಭಿಷೇಕವನ್ನು ಹೊಂದಿದರು?

1) ಎಫೆಸದ ಶಿಷ್ಯರು (ಅ.ಕೃ. 19:1–6).
2) ಕರ್ತನಾದ ಯೇಸುಕ್ರಿಸ್ತನು (ಲೂಕ. 3:21–22).
3) 120 ಶಿಷ್ಯರು (ಅ.ಕೃ. 2:1–6).
4) ಸಮಾರ್ಯದ ವಿಶ್ವಾಸಿಗಳು (ಅ.ಕೃ. 8:15–17).
5) ಅಪೋಸ್ತಲ ಪೌಲನು (ಅ.ಕೃ. 9:17–18).
6) ಕೊರ್ನೇಲ್ಯ ಹಾಗೂ ಅವನ ಮನೆಯವರು (ಅ.ಕೃ. 10:44–48).
7) ಗಲಾತ್ಯದ ವಿಶ್ವಾಸಿಗಳು (ಗಲಾ. 3:3–5).
8) ಕಂಚುಕಿ (ಅ.ಕೃ. 8:35–40).

ದೇವರು ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

**ಯೆಹೋವನ ವಚನವು ಶುದ್ಧವಾದದ್ದು. ಆತನು ಆಶ್ರಿತರೆಲ್ಲರಿಗೆ ಗುರಾಣಿಯಾಗಿದ್ದಾನೆ**
**(ಕೀರ್ತ. 18:30).**

## ಆರೋಗ್ಯ ಸ್ವರ

### ಏನೆಲ್ಲಾ ಕೊಡಬಹುದು......

* ಮಕ್ಕಳಿಗೆ ಬಟ್ಟೆ ಕೊಡುವುದಾದರೆ ವಯಸ್ಸು ತಿಳಿದುಕೊಳ್ಳಿ ಚಿಕ್ಕಮಕ್ಕಳಿಗೆ ದೊಡ್ಡ ಸೈಜಿನ ಉಡುಪು ಕೊಂಡಿದ್ದರೆ ಮುಂದ್ಯಾವಾಗಾದರೂ ಉಪಯೋಗಕ್ಕೆ ಬರುತ್ತದೆ. ಅದೇ ದೊಡ್ಡ ಮಕ್ಕಳಿಗೆ ಚಿಕ್ಕ ಉಡುಪು ಉಪಯೋಗಕ್ಕಿಲ್ಲ.

* ಮನೆಗೆ ಬರುವ ಹುಡುಗಿಯರಿಗೆ ಡ್ರೆಸ್ ಮೆಟೀರಿಯಲ್ ಒಳ್ಳೆಯದು. ಯಾಕೆಂದರೆ ನೀವು ಉಡುಪು ಕೊಟ್ಟರೆ ಅದುಅವರ ಅಳತೆಗೆ ಬರದೇ ವೇಸ್ಟ್ ಆಗುತ್ತದೆ.

* ಸುಮ್ಮನೆ ಗ್ರೀಟಿಂಗ್ ಕಾರ್ಡ್ ಕೊಡುವುದು ಅಷ್ಟೇನೂ ಒಳ್ಳೆಯದಲ್ಲ. ಪ್ರೇಮಿಗಳಿಗೆ ಕೊಡುವುದಾದರೆ ಅದರಲ್ಲಿ ನೀವೇ ಬರೆದ ಪದಗಳೋ, ಕವಿತೆಗಳೋ ಇರಲಿ. ಸುಮ್ಮನೆ ಶುಷ್ಕ ಇಂಗ್ಲಿಷ್ ಪದಗಳಿಂದ ಏನೂ ಆಗುವುದಿಲ್ಲ.

* ಮಕ್ಕಳಿಗೆ ಬಟ್ಟೆಗಿಂತ ಪುಸ್ತಕವನ್ನೋ ಉಪಯೋಗಕ್ಕೆ ಬರುವ ವಸ್ತುಗಳನ್ನೋ ಕೊಡಿ. ಶಾಲೆಗೆ ಹೋಗುವವರಾದರೆ ವಾಚ್, ಬ್ಯಾಗ್, ಪೆನ್ ಇತ್ಯಾದಿ. ಕಾಲೇಜಿಗೆ ಹೋಗುವವರಾದರೆ ಅವರ ಕೆರಿಯರ್‌ಗೆ ಉಪಯುಕ್ತವಾಗುವಂಥ ವಸ್ತು ಕೊಡಿ.

* ಬೊಕ್ಕೆ ಕೊಡುವುದೋ, ಹೂ ಕೊಡುವುದೋ ನೋಡುವುದಕ್ಕಷ್ಟೇ ಚೆಂದ. ಅದನ್ನು ಎರಡು ದಿನದ ಮೇಲೆ ಇಟ್ಟುಕೊಳ್ಳುವ ಹಾಗೂ ಇಲ್ಲ. ಅದರ ಬದಲು ಉಪಯೋಗಕ್ಕೆ ಬರುವಂಥದ್ದೇನೆಂದು ಯೋಚಿಸಿ.

● **ಹೆಸರು ಕಾಳಿನ ವೈವಿಧ್ಯ ಹೆಸರು ಕಾಳಿನ ಬಾಲ್**

ಬೇಕಾಗುವ ಸಾಮಗ್ರಿ: ಹೆಸರು ಕಾಳು –1ಕಪ್, ಬೆಳ್ಳುಳ್ಳಿ ಎಸಳು –5,6, ಈರುಳ್ಳಿ–2, ಟೊಮೊಟೋ–3, ಖಾರಾಪುಡಿ–1 ಟೇಬಲ್ ಚಮಚ, ಹಸಿಮೆಣಸಿನಕಾಯಿ –2, ಚೆನ್ನಮಸಾಲ ಪುಡಿ–1 ಟೇಬಲ್ ಚಮಚ ಗರಂಮಸಾಲ ಸ್ವಲ್ಪ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಹೆಸರುಕಾಳನ್ನು 2 ಗಂಟೆ ನೆನಸಿ ರುಬ್ಬಿ, ಬಾಣಲೆಗೆ ಎಣ್ಣೆ ಹಾಕಿ ರುಬ್ಬಿದ ಪೇಸ್ಟ್ ಹಾಕಿ. ಬೆಳ್ಳುಳ್ಳಿ ಸಣ್ಣಗೆ ಹೆಚ್ಚಿಹಾಕಿ. 1 ಟೊಮೆಟೊ, 1 ಈರುಳ್ಳಿ ಉಪ್ಪು ಹಾಕಿ. ಗಟ್ಟಿಯಾಗುವವರೆಗೆ ಬೇಯಿಸಿ, ಆರಿಸಿ. ತಣ್ಣಗಾದ ಮೇಲೆ ಸಣ್ಣ ಸಣ್ಣ ಉಂಡೆಗಳನ್ನು ಮಾಡಿ.

ಮತ್ತೊಂದು ಪ್ಯಾನ್ ಇಟ್ಟು ಎಣ್ಣೆ ಹಾಕಿ ಸಾಸಿವೆ, ಈರುಳ್ಳಿ –1 ಹೆಚ್ಚಿ ಹಾಕಿ. 2 ಟೊಮೆಟೋ ರುಬ್ಬಿ ಹಾಕಿ, ಖಾರಪುಡಿ ಹಸಿಮೆಣಸಿನ ಕಾಯಿ ಚೆನ್ನ ಮಸಾಲ ಪುಡಿ, ಗರಂ ಮಸಾಲ ಪುಡಿ, ಸ್ವಲ್ಪ ನೀರು, ಉಪ್ಪು ಹಾಕಿ ಮುಚ್ಚಿಡಿ. ಕುದಿ ಬಂದ ಮೇಲೆ ಬಾಲ್‌ಗಳನ್ನು ಹಾಕಿ ಕುದಿಸಿ. ಸಣ್ಣ ಉರಿಯಲ್ಲಿ 5 ನಿಮಿಷ ಬೇಯಿಸಿ, ಆರಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.

● **ಮಲಬದ್ಧತೆ ನಿವಾರಣೆಗೆ ಪರಿಹಾರೋಪಾಯಗಳು**

* ತುಂಬ ಹೊತ್ತು ನಿಂತಿರುವುದು ಅಥವಾ ಕುಳಿತಿರುವುದು ಸಲ್ಲದು. ಆಗಾಗ್ಗೆ ಅಡ್ಡಾಡುವುದು ಹಿತಕರ. ಸಂಪೂರ್ಣ ವಿಶ್ರಾಂತಿ ಹೇಳಿದ ಸಂದರ್ಭವನ್ನು ಹೊರತುಪಡಿಸಿ ಉಳಿದ ಎಲ್ಲಾ ಸಂದರ್ಭಗಳಲ್ಲಿ ಗರ್ಭಿಣಿ ಸ್ತ್ರೀಯರು ನಡಿಗೆ, ಗರ್ಭಾವಸ್ಥೆಯ ಅವಧಿಯ ವ್ಯಾಯಾಮ ಅಥವಾ ಯೋಗಾಸನಗಳನ್ನು ಮಾಡುವುದು ಉತ್ತಮ. ಇದು ಮಲಬದ್ಧತೆಯನ್ನು ನಿವಾರಿಸುವುದು ಮಾತ್ರವಲ್ಲ ಗರ್ಭಿಣಿಯರ ಸಂಪೂರ್ಣ ಆರೋಗ್ಯಕ್ಕೂ ಸುಖಪ್ರಸವಕ್ಕೂ ಹಿತಕರ.

* ಅಂತ:ಉದರ ಭಾರ ಹೆಚ್ಚುವಂತೆ ಹೆಚ್ಚು ಭಾರ ಎತ್ತುವುದು ಸಲ್ಲದು. ವಾತಕರ ಆಹಾರಗಳಾದ ಆಲೂಗಡ್ಡೆ, ಅವಡೆ, ಅವರೆಕಾಳು, ಗೆಣಸು ಇತ್ಯಾದಿಗಳ ಅಧಿಕ ಸೇವನೆ ಹಿತಕರವಲ್ಲ.

* ಮಲಪ್ರವೃತ್ತಿಯ ಸಮಯದಲ್ಲಿ ಅಧಿಕ ಒತ್ತಡ ಹಾಕಿ ಮಲ ವಿಸರ್ಜನೆಗೆ ಪ್ರಯತ್ನಿಸಬಾರದು. ಇದರಿಂದ ರಕ್ತಸ್ರಾವವಾಗುವ ಸಂಭವವಿರುತ್ತದೆ.

* ದಿನಕ್ಕೆ 10–15 ಲೋಟ ನೀರು ಸೇವಿಸುವುದು ಜಲೀಯ ಅಂಶದ ಕೊರತೆಯನ್ನು ನಿವಾರಣೆ ಮಾಡಿ ಮಲಬದ್ಧತೆಯ್ನು ನಿವಾರಣೆ ಮಾಡುತ್ತದೆ.

* ನಾರಿನಂಶ ಅಧಿಕವಿರುವ ಸೊಪ್ಪು ತರಕಾರಿ, ಒಣದ್ರಾಕ್ಷೆ, ಬಾಳೆಹಣ್ಣು, ಮೊಳಕೆ ಬರಿಸಿದ ಧಾನ್ಯ, ತಂಪಿನ ಬೀಜ (ಇಸಾಲ್ ಗೋಲ್) ಇವುಗಳ ಸೇವನೆ ಮಲಬದ್ಧತೆಯನ್ನು ನಿವಾರಣೆ ಮಾಡುತ್ತದೆ.

* ಅತೀ ಸಂಸ್ಕರಿತ ಆಹಾರ ಸೇವನೆ ಉತ್ತಮವಲ್ಲ, ಕರಿದ ತಿಂಡಿ, ಅಧಿಕ ಸಿಹಿ ಅಂಶವುಳ್ಳ ಆಹಾರ, ಜಂಕಫುಡ್, ಫಾಸ್ಟ್‌ಫುಡ್ ಹಿತಕರವಲ್ಲ.

* ತಾಜಾ ಹಣ್ಣುಗಳ ಸೇವನೆ ಅಥವಾ ತಾಜಾ ಹಣ್ಣಿನ ಜ್ಯೂಸ್ ಹಿತಕರ.

– ಸಂಗ್ರಹ.

**ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತಭಾಗ್ಯವಿದೆ (ಕೀರ್ತ. 16:11).**

## ಮನವಿ ಪತ್ರ

34 ವರ್ಷದ ಪಾ॥ ತೋಮಸ್ಸ್ ರಾಜು ಎಂಬುವವರು ಅನೇಕ ವರ್ಷಗಳಿಂದ ಸೇವೆಯಲ್ಲಿದ್ದು ಈಗ ಅಸ್ವಸ್ಥರಾಗಿದ್ದಾರೆ. ವೈದ್ಯರು ಅವರಿಗೆ ರಕ್ತ ಕ್ಯಾನ್ಸರ್ ಎಂದು ಪತ್ತೆ ಹಚ್ಚಿದ್ದಾರೆ. ಇವರ ವೈದ್ಯಕೀಯ ಶುಶ್ರೂಷೆಗಾಗಿ 6ರಿಂದ 7 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ.

ಇವರಿಗೆ ಸಹಾಯ ಹಸ್ತವನ್ನು ಚಾಚುವವರು ಯಾರಾದರೂ ಇರುವುದಾದರೆ ಅಥವಾ ದೇವರು ನಿಮಗೆ ಕೊಡಲು ಪ್ರೇರೇಪಿಸುವುದಾದರೆ ಈ ಕೆಳಕಂಡ ಖಾತೆಗೆ / ಹೆಸರಿನಲ್ಲಿ ಡಿ.ಡಿ ಅಥವಾ ಚೆಕ್ ಕಳುಹಿಸಬಹುದು.

ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ.

**Thangaraju / Thomas Raju**
**A/c No. 073200101010684 (IFSC Code. CORP0000732)**
**Corparation Bank Mangalore.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ
**ದೂರವಾಣಿ ಸಂಖ್ಯೆ : 09448164142, 09036223304.**

e-mail : paulmzedek@yahoo.com

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**
**9902334941, 08202002781, 09964070654.**

---

**ಜೋಕ್ಸ್**

**ಜಾಣ ಶಿಷ್ಯ**

ಟೀಚರ್ : ಗುಂಡ, ನಾನು ನಿನ್ನನ್ನು ಕೆಲವು ಪ್ರಶ್ನೆ ಕೇಳುವೆ?"
ಗುಂಡ : "ಕೇಳಿ ಸಾರ್".
ಟೀಚರ್ : "ಇಂಗ್ಲೀಷ್‌ನಲ್ಲಿ ಕೇಳಿದ ಪ್ರಶ್ನೆಗೆ ಇಂಗ್ಲೀಷ್‌ನಲ್ಲೇ ಉತ್ತರ ನೀಡಬೇಕು?"
ಗುಂಡ : "ಆಗಲಿ ಸಾರ್".
ಟೀಚರ್ : "ವಾಟ್ ಈಸ್ ಹಿಸ್ ನೇಮ್?"
ಗುಂಡ : "ಮೂನ್ ಲೈಟ್".
ಟೀಚರ್ : (ಕೋಪದಿಂದ) "ಏನು ಹೇಳುತ್ತಿರುವೆ ನೀನು?"
ಗುಂಡ : "ಹೌದು, ಚಂದ್ರಕಾಂತ ಅವನ ಹೆಸರು. ಇಂಗ್ಲೀಷಿನಲ್ಲಿ ಮೂಲ್‌ಲೈಟ್ ಅಲ್ಲವೆ?"

ಯೆಹೋವನು ಸ್ತೋತ್ರಕ್ಕೆ ಅರ್ಹನು; ಆತನಿಗೆ ನಾನು ಮೊರೆಯಿಡಲು ಆತನು ನನ್ನನ್ನು ಶತ್ರುಗಳಿಂದ ರಕ್ಷಿಸುತ್ತಾನೆ (ಕೀರ್ತ. 18:2).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಪಾಕಿಸ್ತಾನ ಬೆಂಕಿ ಆಕಸ್ಮಿಕಕ್ಕೆ 314 ಬಲಿ ದಕ್ಷಿಣ ಕರಾಚಿಯ ಬಟ್ಟೆ ಫ್ಯಾಕ್ಟರಿ ಹಾಗೂ ಲಾಹೋರ್‌ನ ಶೂ ತಯಾರಿಕಾ ಘಟಕದಲ್ಲಿ ಮಂಗಳವಾರ ಸಂಭವಿಸಿದ ಭೀಕರ ಬೆಂಕಿ ಆಕಸ್ಮಿಕದಲ್ಲಿ ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ಕನಿಷ್ಠ 314 ಮಂದಿ ಮೃತಪಟ್ಟಿದ್ದಾರೆ.

- ಬರ ಪರಿಹಾರಕ್ಕೆ ಕೇಂದ್ರ ಸರಕಾರ ಹೆಚ್ಚಿನ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ರಾಜ್ಯ ಸರಕಾರ ನಿರಂತರ ಆರೋಪ ಮಾಡುತ್ತಿದೆ. ಆದರೆ ಕೇಂದ್ರ ಇದುವರೆಗೆ ಬಿಡುಗಡೆ ಮಾಡಿರುವ ಹಣವನ್ನೇ ಪೂರ್ಣ ಪ್ರಮಾಣದಲ್ಲಿ ರಾಜ್ಯ ಖರ್ಚುಮಾಡದಿರುವ ಅಚ್ಚರಿಯ ಸಂಗತಿ ಬೆಳಕಿಗೆ ಬಂದಿದೆ.

- ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಹಗರಣ ಮತ್ತು ಸಾಂವಿಧಾನಿಕ ಸಂಸ್ಥೆಯಾಗಿರುವ ಸಿಎಜಿ ವಿರುದ್ಧ ಮಾಡಲಾಗುತ್ತಿರುವ ಆರೋಪಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಕೂಡಲೇ ಮಧ್ಯಪ್ರವೇಶಿಸಿ, ಸೂಕ್ತ ತನಿಖೆ ಮಾಡಿಸುವಂತೆ ಬಿಜೆಪಿ ಒತ್ತಾಯಿಸಿದೆ.

- ಮುಂದೂಡುತ್ತಲೇ ಬಂದಿದ್ದ ಬೆಲೆ ಏರಿಕೆ ಬಿಸಿ ಕೊನೆಗೂ ಜನ ಸಾಮಾನ್ಯನ ಮೇಲೆ ಅಪ್ಪಳಿಸಿದೆ. ಡೀಸೆಲ್ ಬೆಲೆಯನ್ನು ಪ್ರತಿ ಲೀ.ಗೆ 5.62 ರೂ. ಏರಿಸಿ ಕೇಂದ್ರ ಸರಕಾರ ಆದೇಶ ಹೊರಡಿಸಿದೆ. ಅಲ್ಲದೆ, ಬ್ರ್ಯಾಂಡೆಡ್ ಡೀಸೆಲ್ ಸಬ್ಸಿಡಿಯನ್ನು ತೆಗೆದು ಹಾಕಿದೆ. ಜತೆಗೆ ಪ್ರತಿ ಕುಟುಂಬಕ್ಕೆ 1 ವರ್ಷಕ್ಕೆ ಸಬ್ಸಿಡಿ ಸಹಿತ ಅಡುಗೆ ಅನಿಲದ ಸಿಲಿಂಡರನ್ನು 6ಕ್ಕೆ ಸೀಮಿತಗೊಳಿಸಿದೆ. ಆದರೆ ಪೆಟ್ರೋಲ್ ಮತ್ತು ಸೀಮೆಎಣ್ಣೆ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

- ಅಧಿಕೃತ ಅಂಕಿಸಂಖ್ಯೆ ಪ್ರಕಾರ ಜಗತ್ತಿನಲ್ಲಿ ಪ್ರತಿದಿನ ಐದು ವರ್ಷಕ್ಕಿಂತ ಕೆಳಗಿನ ಪ್ರಾಯದ 19.000 ಮಕ್ಕಳು ಸಾವನ್ನಪ್ಪುತ್ತಿದ್ದಾರೆ. 2011ರಲ್ಲಿ ಈ ಪಟ್ಟಿಯಲ್ಲಿ ಭಾರತ ಅಗ್ರ ಪಂಕ್ತಿಯಲ್ಲಿದೆ. 2011ರಲ್ಲಿ ಭಾರತದಲ್ಲಿ 16.55 ಲಕ್ಷ ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ವಿಶ್ವಸಂಸ್ಥೆ ವರದಿ ತಿಳಿಸಿದೆ.

- ಮಹಾರಾಷ್ಟ್ರ, ಆಂಧ್ರ ಸಿಎಂ ಬದಲು? ಪ್ರಧಾನಿ ಮನಮೋಹನ್ ಸಿಂಗ್, ಇದೀಗ ಪಕ್ಷ ಮತ್ತು ಸರಕಾರದೊಳಗಿನ ಸುಧಾರಣೆಯ ನಿಟ್ಟಿನಲ್ಲಿ ಭಾರೀ ಬದಲಾವಣೆಗೆ ಮುಂದಾಗಿದ್ದಾರೆ. ಇದರನ್ವಯ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಬದಲಾವಣೆ ಸಾಧ್ಯತೆ ನಿಚ್ಚಳವಾಗಿದೆ.

## ವಿಶೇಷ ಪ್ರಕಟಣೆ

**ಡಿಸೆಂಬರ್ 2012 11 ರಿಂದ 15/12/12ರವರೆಗೆ ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರದಲ್ಲಿ ಐದು ದಿವಸದ ಪವರ್ ಕಾನ್ಫರೆನ್ಸ್ ಕೂಟವನ್ನು ನಡೆಸಲಾಗುವದು ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**08202002781, 9902334941, 9964070654, 9740985802**

**ಪ್ರವೇಶ ಶುಲ್ಕ 600/– ಮಾತ್ರ. ( ಊಟ ನೀಡಲಾಗುವದು)**

**ಸಮಯ ಬೆಳಿಗ್ಗೆ 10:00ರಿಂದ ಸಂಜೆ 7:00 ಗಂಟೆಯವರೆಗೆ.**

ಈ ಕಾನ್ಫರೆನ್ಸ್‌ನಲ್ಲಿ ಗಿನಿಸ್ಸ್ ದಾಖಲೆ ಹೊಂದಿರುವ ಆರಾಧನಾ ನಾಯಕರಾದ ಚೆನ್ನೈನ ಬೆರಕಾ ತಂಡದ ಪಾ॥ ಜಯಶೀಲನ್‌ರವರು ಇರುತ್ತಾರೆ. ಹಾಗೂ ಬಿಡುಗಡೆಯ ಸೇವೆಯಲ್ಲಿ ಪ್ರಸಿದ್ಧರಾಗಿರುವ ಚೆನ್ನೈನ ಬೆರಾಕ ತಂಡದ ಪಾ॥ ನೆಹೆಮಿಯರವರು ಈ ಕಾನ್ಫರನ್ಸ್‌ನಲ್ಲಿ ನಮ್ಮೊಂದಿಗಿರುತ್ತಾರೆ ಮತ್ತು ಆಂಧ್ರದಲ್ಲಿ ಡಿಜಿಎಸ್ಸ್ ದಿನಾಕರನ್ ಎಂಬುದಾಗಿ ಕರೆಯಲ್ಪಡುವ ಜನರ ಮಧ್ಯದಲ್ಲಿ ಹೆಸರಿಡಿದು ಕರೆಯುವ ಅಪೋಸ್ತಲರಾದ ತೋಮಸ್ಸ್ ರವರು ಈ ಕಾನ್ಫರನ್ಸ್‌ನಲ್ಲಿ ನಮ್ಮೊಂದಿಗಿರುತ್ತಾರೆ. ಮತ್ತು ದೇವರಿಂದ ಬಲವಾಗಿ ಉಪಯೋಗಿಸಲ್ಪಡುತ್ತಿರುವ ಸಹೋ॥ ಹೆಬಿಕ್ ಸೈಮನ್‌ರವರು ಈ ಕಾನ್ಫರನ್ಸ್‌ನಲ್ಲಿ ನಮ್ಮೊಂದಿಗಿರುತ್ತಾರೆ. ಹಾಗೂ ದೇವರಿಂದ ಬಲವಾಗಿ ಉಪಯೋಗಿಸಲ್ಪಡುತ್ತಿರುವ ಇನ್ನಿತರ ದೇವಸೇವಕರು ಈ ಕಾನ್ಫರನ್ಸ್‌ನಲ್ಲಿ ಸೇವ ಮಾಡಲಿರುತ್ತಾರೆ.

**ಆತನು ನನ್ನನ್ನು ಬಿಡಿಸಿ ವಿಶಾಲಸ್ಥಳದಲ್ಲಿ ಸೇರಿಸಿದನು; ನನ್ನನ್ನು ಮೆಚ್ಚಿ ರಕ್ಷಿಸಿದನು**

**(ಕೀರ್ತ. 18:19).**

# ಪ್ರೀತಿ ಯೇಸುವಿನ ಪ್ರೀತಿ

**"ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು. ಆತನು ನಿನ್ನ ನೀತಿಯನ್ನು ಉದಯದ ಬೆಳಕಿನಂತೆಯೂ ನಿನ್ನ ನ್ಯಾಯವನ್ನು ಮಧ್ಯಾಹ್ನ ತೇಜಸ್ಸಿನಂತೆಯೂ ಪ್ರಕಾಶಗೊಳಿಸುವನು"** ಕ್ರಿಸ್ತನಲ್ಲಿ ಪ್ರೀತಿಯುಳ್ಳ ಸಹೋದರ/ಸಹೋದರಿ ನಿಮ್ಮ ಮುಂದೆ ನಾನು ಸಣ್ಣ ಕಥೆಯೊಂದನ್ನು ಹೇಳಲು ಇಷ್ಟಪಡುತ್ತೇನೆ. ಒಮ್ಮೆ ಇಬ್ಬರು ಪ್ರೇಮಿಗಳು ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿಸುತ್ತಾ ಇರುತ್ತಾರೆ. ಅದೇ ಸಮಯಕ್ಕೆ ಅವನ ಪ್ರೇಯಸಿ ಒಂದು ಅಪಘಾತದಲ್ಲಿ ಸಾಯುತ್ತಾಳೆ. ಇದನ್ನು ಸಹಿಸಲಾರದ ಪ್ರೇಮಿ ಪ್ರತಿದಿನ ಅವಳಿಗಾಗಿ ಅಳುತ್ತಾ ಕಣ್ಣೀರಿಡುತ್ತೀರುತ್ತಾನೆ. ಯಾರೇ ಬಂದು ಎಷ್ಟೇ ಸಮಾಧಾನ ಮಾಡಿದರೂ ಅವನಿಗೆ ಸಮಾಧಾನವಾಗದೆ ಅಳುತ್ತಲೆ ಇರುತ್ತಾನೆ. ಹೀಗಿರುವಾಗ ಒಂದು ರಾತ್ರಿ ಮಲಗಿದಂತಹ ಸಮಯದಲ್ಲಿ ಒಂದು ಕನಸನ್ನು ಕಾಣುತ್ತಾನೆ. ಅದರಲ್ಲಿ ಸ್ವರ್ಗ ತೆರೆದಿರುವುದು ಅಲ್ಲಿ ಅವನ ಪ್ರೇಯಸಿ ಸಹ ಮತ್ತು ಇತರರು ಇರುವುದನ್ನು ನೋಡುತ್ತಾನೆ ಅಷ್ಟು ಮಾತ್ರವಲ್ಲ ಪ್ರತಿಯೊಬ್ಬರ ಕೈಯಲ್ಲಿ ಮೇಣದ ಬತ್ತಿ ಮತ್ತು ಅದು ಉರಿಯುತ್ತಿರುವುದನ್ನು ನೋಡುತ್ತಾನೆ. ಆದರೆ ಅವನು ಪ್ರೀತಿಸುತ್ತಿದ್ದ ಹುಡುಗಿಯ ಕೈಯಲ್ಲಿ ಮಾತ್ರ ಮೇಣದ ಬತ್ತಿ ಉರಿಯುತ್ತಿಲ್ಲ ಇದನ್ನು ನೋಡಿ ಆಕೆಯ ಬಳಿ ಕೇಳುತ್ತಾನೆ. ಅದಕ್ಕೆ ಅವಳು ನಾನು ಪ್ರತಿ ಸಾರಿ ಮುಂಬತ್ತಿಯನ್ನು ಹತ್ತಿಸಿಕೊಳ್ಳುತ್ತೇನೆ ಆದರೆ ನಿನ್ನ ಕಣ್ಣೀರು ಬಂದು ಅದರ ಬೆಳಕನ್ನು ಆರಿಸಿಬಿಡುತ್ತದೆ ಎಂದು ಉತ್ತರಿಸುತ್ತಾಳೆ. ಎಚ್ಚರವಾದಗ ಅವನಿಗೆ ಅವನ ತಪ್ಪಿನ ಅರಿವಾಗುತ್ತದೆ. ಅದರ ನಂತರ ಅವನು ಅವಳಿಗಾಗಿ ಅಳುವುದನ್ನು ನಿಲ್ಲಿಸುತ್ತಾನೆ. **"ಸಾರ್ವಭೌಮನಾದ ಯೆಹೋವನ ಎದುರಿನಲ್ಲಿ ಪರ್ವತಗಳು ಮೇಣದಂತೆ ಕರಗಿಹೋದವು"** (ಕೀರ್ತ. 97:5).

ಇದು ಒಂದು ಕಥೆಯಾದರೂ ಪ್ರಿಯರೇ, ಇದರಲ್ಲಿ ಕೆಲವೊಂದು ವಿಷಯಗಳನ್ನು ನಾವು ತಿಳಿದು ಕೊಳ್ಳಬಹುದು. ದೇವರು ನಮ್ಮನ್ನು ಎಷ್ಟಾಗಿ ಪ್ರೀತಿಸುತ್ತಾನೆ. **"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು"** (ಯೋಹಾ. 3:16). ಆದರೆ ನಾವು ಯಾವಾಗಲೂ ಕಳೆದು ಕೊಂಡಂತಹ ನಷ್ಟದ ಕುರಿತಾಗಿ ಯೋಚಿಸಿ ಸಮಯವನ್ನು ಹಾಳುಮಾಡಿಕೊಳ್ಳುತ್ತೇವೆ, ಅದಕ್ಕೆ ಪ್ರತಿಯಾಗಿ ನಾವು ನಮ್ಮ ಆಶೀರ್ವಾದಗಳನ್ನು ಕಳೆದುಕೊಳ್ಳುತ್ತೇವೆ. ದೇವರು ಬೆಳಕನ್ನು ನಮಗಾಗಿ ಇಟ್ಟಿದ್ದಾನೆ. ಯೇಸು ಎಂಬ ಬೆಳಕು ನಮ್ಮ ಜೊತೆಯಲ್ಲಿ ನಮ್ಮ ಜೀವನದಲ್ಲಿ ಇರುವಾಗ ನಾವು ಯಾವ ಕತ್ತಲೆಗೂ, ನಷ್ಟಕ್ಕೂ, ಗತಿಸಿದಂತ ವಿಷಯಗಳಿಗೂ ಚಿಂತಿಸುವ ಅಗತ್ಯವಿಲ್ಲ. **"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು"** (ಯೋಹಾ. 8:12). ಆತನು ನಾವು ಬೆಳಕಲ್ಲೇ ಇರಬೇಕೆಂದು ಪಾಪದ ಲೋಕಕ್ಕೆ ಹೋಗದೆ ನಿತ್ಯಜೀವವನ್ನು ಹೊಂದಿಕೊಳ್ಳಬೇಕೆಂದು ಆತನು ನಮಗಾಗಿ ಸಕಲ ವಿಧವಾದ ಆಶೀರ್ವಾದಗಳನ್ನು ಆತನಲ್ಲಿರುವ ವರಗಳನ್ನು, ಫಲಗಳನ್ನು ನಮಗೆ ಕೊಡಲು ಕಾಯುತ್ತಿರುತ್ತಾನೆ. **"ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ"** (ಯಾಕೋ. 1:17).

**"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ. ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ"** (1 ಕೊರಿ. 2:9). ಅದರ ಬಗ್ಗೆ ಕಿಂಚಿತ್ತು ಚಿಂತಿಸದೇ ನಮ್ಮಲ್ಲಿರುವ ಕೊರತೆಗಳಿಗಾಗಿ ನಾವು ಅಳುತ್ತಾ ಇರುತ್ತೇವೆ. ಹೌದು ನಾವು ಕಳೆದು ಕೊಂಡಂತ ವಿಷಯದಲ್ಲಿ ದು:ಖವಿದ್ದರೂ ಅದನ್ನು ನಷ್ಟವೆಂದು ಎಣಿಸಿ ದೇವರು ನಮಗಾಗಿ ಇಟ್ಟ ಪ್ರೀತಿಗಾಗಿ ನಾವು ಸಂತೋಷಿಸಬೇಕು. ಪಾಸ್ಟರ್ ಕಾಳನಾಯಕ್‌ರವರ ಹಾಡುಗಳಲ್ಲಿ ಒಂದಾದ 'ಯೇಸು ನನ್ನಲ್ಲಿ ಬಂದರೇ ಸಂತೋಷ

ಸಂತೋಷ ಎಂಬ ಹಾಡನ್ನು ನೀವು ಕೇಳಿರಬಹುದು. ಅವರು ಆ ಹಾಡನ್ನು/ರಚಿಸಿ ಹಾಡುವಾಗ ಆ ಯೇಸುವಿನ ಪ್ರೀತಿ ತ್ಯಾಗ ಕರುಣೆಯ ಕುರಿತಾಗಿ ಅವರು ಅನುಭವಿಸಿದ ಪ್ರೀತಿಯೇ ಅಳದ ಕುರಿತಾಗಿ ವರ್ಣಿಸುತ್ತಾರೆ. ಅದೇ ರೀತಿಯಾಗಿ ನೀವು ಸಹ ಲೋಕದ ಎಲ್ಲಾ ವಿಷಯಗಳನ್ನು ಬದಿಯಲ್ಲಿ ಇಟ್ಟು 'ಯೇಸು'ವನ್ನು ನಮ್ಮ ಮುಂದೆ ಇಟ್ಟು ಜೀವಿತದ ಓಟವನ್ನು ಓಡೋಣ. ನಾವು ಲೋಕದ ಅಂತ್ಯದಲ್ಲಿ ಇದ್ದೇವೆ. ಅದಕ್ಕಾಗಿ ನಮ್ಮ ಎಲ್ಲಾ ಆಲೋಚನೆಗಳನ್ನು ತ್ಯಜಿಸಿ ಯೇಸು ನಮಗಾಗಿ ಇಟ್ಟ ಪ್ರೀತಿಗಾಗಿ, ತ್ಯಾಗಕ್ಕಾಗಿ ನಾವು ಅದನ್ನು ಹೊಂದಿಕೊಳ್ಳಲು ಯೋಗ್ಯರಾಗಿರುವಂತೆ ನಡೆದು ಕೊಳ್ಳೋಣ. ಯಾರು ಎಷ್ಟೇ ಪ್ರೀತಿಸಿದರೂ ನಮಗಾಗಿ ಏನೇ ಮಾಡಿ, ಏನೇ ಕೊಟ್ಟರೂ ಕ್ರಿಸ್ತೇಸುವಿನ ಪ್ರೀತಿಯ ಮುಂದೆ ಅದು ಲೆಕ್ಕಕ್ಕೆ ಇಲ್ಲ. ಅದಕ್ಕಾಗಿ ಯೇಸುವಿನ ಪ್ರೀತಿಯನ್ನು ನಾವು ತಾತ್ಸರ ಮಾಡದೇ ಅದಕ್ಕೆ ಯೋಗ್ಯರಾಗುವಂತೆ ನಡೆದುಕೊಳ್ಳೋಣ. ನಮ್ಮಲ್ಲಿ ಏನೇ ಇದ್ದರೂ ಯೇಸು ಎಂಬ ಐಶ್ವರ್ಯ ನಿಮ್ಮಲ್ಲಿ ಇಲ್ಲದಿದ್ದರೆ ನೀವು ಬಡವರಲ್ಲಿ ಕಡೂ ಬಡವರಾಗಿದ್ದೀರಿ. ಅದಕ್ಕಾಗಿ ಯೇಸುವನ್ನು ಪ್ರೀತಿಸಿ ಆತನ ಪ್ರೀತಿಯಲ್ಲಿ ನೆಲೆಯಾಗಿರಿ. ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವಾದಿಸಿ ಕ್ರಿಸ್ತೇಸುವಿನಲ್ಲಿ ನಿಮ್ಮನ್ನು ಅಭಿವೃದ್ಧಿಪಡಿಸಲಿ ಆಮೆನ್.

ಕ್ರಿಸ್ತನಲ್ಲಿ ನಿಮ್ಮ ಪ್ರೀತಿಯ

**ಸಹೋ॥ ಪ್ರಸಾದ್ ಪ್ರಭು.**

---

**ಪ್ರಾರ್ಥನಾ ಮನವಿಗಳು**

- **ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸಿ ವಿಸ್ತರಿಸುವಂತೆ ಪ್ರಾರ್ಥಿಸಿರಿ.**
- **ನಮ್ಮ ಪ್ರತಿಯೊಂದು ಸೇವೆಯನ್ನು ಕರ್ತನು ಆಶೀರ್ವದಿಸುವಂತೆ ಅದಕ್ಕೆ ಬೇಕಾಗುವ ಆರ್ಥಿಕ ಅವಶ್ಯಕತೆಗಳನ್ನು ಸಂಧಿಸುವುದಕ್ಕಾಗಿ ಪ್ರಾರ್ಥಿಸಿರಿ.**
- **ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಅಧಿಕಾರ ನಡೆಸುತ್ತಿರುವ ಪ್ರತಿಯೊಂದು ಅಧಿಕಾರಿಗಳು ನಿಷ್ಠೆಯಿಂದ ಆಳ್ವಿಕೆ ಮಾಡುವಂತೆ ಪ್ರಾರ್ಥಿಸಿರಿ.**
- **ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಇರುವ ಬರಗಾಲ, ನೀರಿನ ಕೊರತೆ, ವಿದ್ಯುತ್‌ಚ್ಛಕ್ತಿಯ ಕೊರತೆಗಳು ನೀಗುವುದಕ್ಕಾಗಿ ಪ್ರಾರ್ಥಿಸಿರಿ.**
- **ಭ್ರಷ್ಟಾಚಾರ, ಭಯೋತ್ಪಾದನೆ, ಮೋಸ ವಂಚನೆಗಳಿಂದ ದೇಶವನ್ನು ಕರ್ತನು ರಕ್ಷಿಸುವುದಕ್ಕಾಗಿ ಪ್ರಾರ್ಥಿಸಿರಿ.**
- **ರಾಜಕೀಯ ಗೊಂದಲಗಳು ನೀಗುವಂತೆ ದೇಶದಲ್ಲಿ ಸಮಾಧಾನ ನೆಲೆಸುವಂತೆ ಪ್ರಾರ್ಥಿಸಿರಿ.**

---

## ಡಿಜಿಎಮ್ ಬೇತೇಲ್ ಅಂಕಣ

- **ಮಾನಸಿಕ ಅಸ್ವಸ್ಥರಾಗಿ ರಸ್ತೆಯಲ್ಲಿ ಅಲೆದಾಡುತ್ತಿದ್ದ ಭುಜಂಗಯ್ಯ, ಈಶ್ವರ್, ಸೋನವ್ವ, ಸೀಮಾ, ಕಲ್ಯಾಣಿ ಇವರು ವಿಶ್ವಾಸದ ಮನೆ ಅನಾಥಾಶ್ರಮದಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆ ಹೊಂದಿ ಗುಣಮುಖರಾಗಿ ತಮ್ಮ ಕುಟುಂಬಕ್ಕೆ ತೆರಳಿದ್ದಾರೆ.**
- **ಕರ್ತನ ಕೃಪೆಯಿಂದ ಸಪ್ಟೆಂಬರ್ 21–23ರಂದು ಡಿಜಿಎಮ್ ಬೇತೇಲ್ ಶಂಕರಪುರ ಸಭೆಯಲ್ಲಿ 3 ದಿವಸದ ವಿಶೇಷ ಕೂಟಗಳನ್ನು ನಡೆಸಲಾಯಿತು. ಪಾ॥ ಮೋಸಸ್ ಓರ್ಝೋರವರು ದೇವರ ವಾಕ್ಯವನ್ನು ಹಂಚಿದರು ಹಾಗೂ ಸಹೋ॥ ಲಕ್ಷ್ಮಣ್‌ರವರು ಭಾಷಾಂತರಿಸಿದರು.**

**ಯೆಹೋವನೇ, ನಿನ್ನ ನಿವಾಸವು ನನಗೆ ಎಷ್ಟೋ ಪ್ರಿಯ; ನಿನ್ನ ಪ್ರಭಾವಸ್ಥಾನವು ನನಗೆ ಇಷ್ಟ**
**(ಕೀರ್ತ. 26:8).**

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1. **ಮೂಲಪ್ರತಿಗಳು :–** ಮೂಲ ಪ್ರತಿಗಳ ಆಧಾರದಿಂದ ಅತಿ ಪುರಾತನ ಬರಹಗಳು ದೊರಕಿದೆ. ಇವುಗಳಲ್ಲಿ ಮೂರು ಮುಖ್ಯವಾದ ಆಧಾರಿತ ಲೇಖನಗಳನ್ನು ಕೊಡಲಾಗಿದೆ.

ಅ) ಸೀನಾಯಿ ಪ್ರದೇಶದ ಹಸ್ತಪ್ರತಿಗಳು :– ನಾಲ್ಕನೇ ಶತಮಾನದಲ್ಲಿದ್ದ ಗ್ರೀಕ್ ಭಾಷೆಯ ಹಸ್ತ ಪ್ರತಿಗಳೇ ಮೂಲ ಪ್ರತಿಗಳು, ಗ್ರೇಟ್ ಬ್ರಿಟನ್ನಿನವರು ಈ ಪ್ರತಿಗಳನ್ನು 1933 ರಲ್ಲಿ ಸೋವಿಯತ್ ರಷ್ಯಾದಿಂದ ಕ್ರಯಕ್ಕೆ ಪಡಕೊಂಡು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿಟ್ಟಿರುವರು.

ಆ) ಅಲೆಗ್ಸಾಂಡ್ರಿಯದ ಹಸ್ತಪ್ರತಿಗಳು :– ಬಹಳ ಮಟ್ಟಿಗೆ 5ನೇ ಶತಮಾನದಲ್ಲಿ ಬರೆಯಲ್ಪಟ್ಟಿರಬಹುದು. ಈಗ ಇದು ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿದೆ. ಕಳೆದು ಹೋದ ನಾಲ್ವತ್ತು ಪುಟಗಳು ಹೊರತಾಗಿ ಗ್ರೀಕ್ ಭಾಷಾಂತರದ ಸಂಪೂರ್ಣ ಸತ್ಯವೇದವು ಈ ಪತ್ರಿಗಳನ್ನು ಹೊಂದಿಕೊಂಡಿವೆ.

ಇ) ವ್ಯಾಟಿಕನ್ನಿನ ಮೂಲ ಪ್ರತಿಗಳು :– ರೋಮಿನ ವ್ಯಾಟಿಕನ್ನಿನ ಗ್ರಂಥಾಲಯದಲ್ಲಿ ಈ ಪ್ರತಿಗಳನ್ನಿಟ್ಟಿರುವರು. ಕಳೆದು ಹೋದ ಕೆಲವು ಭಾಗಗಳ ಹೊರತು ಉಳಿದವುಗಳು ಸಂಪೂರ್ಣವಾಗಿ ಸತ್ಯವೇದದಲ್ಲಿ ಇರುವುದು.

2. **ಪುರಾತನ ಭಾಷಾಂತರಗಳು :–**

ಅ) ಸೆಪ್ಟು ಅಜೆಂಟ್ ಭಾಷಾಂತರ :– ಸುಮಾರು ಕ್ರಿ.ಪೂ. 285 ರಲ್ಲಿ ಅಲೆಗ್ಸಾಂಡ್ರಿಯದಲ್ಲಿ ಹಳೇ ಒಡಂಬಡಿಕೆಯ ಇಬ್ರಿಯ ಭಾಷೆಯ ಬರವಣಿಗೆಗಳನ್ನು ಗ್ರೀಕ್ ಭಾಷೆಗೆ ಭಾಷಾಂತರಿಸಿದ್ದು.

ಆ) ಸಮಾರ್ಯದ ಧರ್ಮಶಾಸ್ತ್ರ :– ಇದು ಭಾಷಾಂತರವಲ್ಲ. ಇಬ್ರಿಯ ಭಾಷೆಯಲ್ಲಿ ಸಮಾರ್ಯದ ಗುಣಲಕ್ಷಣಗಳನ್ನು ಶಾಶ್ವತ ಪಡಿಸಿದ ಧರ್ಮಶಾಸ್ತ್ರ.

ಇ) ಪಶಿಟೊ ಅಥವಾ ಸಿರಿಯಾಕ್ :– ಸಮಯ ಸ್ಪಷ್ಟವಾಗಿ ಹೇಳಲಾಗುವುದಿಲ್ಲ. (ಒಂದು ಅಥವಾ ಎರಡನೇ ಶತಮಾನ) ಸಿರಿಯಾದ ಕೆಲವು ಭಾಗದ ಸಾಮಾನ್ಯ ಭಾಷೆಯಲ್ಲಿ ಸಂಪೂರ್ಣ ಸತ್ಯವೇದವನ್ನು ಭಾಷಾಂತರಿಸಲಾಗಿತ್ತು.

ಈ) ಲಾತೀನ್ ಭಾಷಾಂತರ (ವಲ್ಗೇಟ್) :– ರೋಮನ್ ಸಾಮ್ರಾಜ್ಯದಲ್ಲಿ ಲಾತೀನ್ ಭಾಷೆಯು ರಾಷ್ಟ್ರ ಭಾಷೆಯಾಗಿತ್ತು. ಎರಡನೇ ಶತಮಾನದಲ್ಲಿಯೇ ಲಾತಿನ್ ಭಾಷೆಗಳಲ್ಲಿ ಅನೇಕ ಸತ್ಯವೇದಗಳು ಇದ್ದವು. ರೋಮಿನ ಬಿಶೋಪರು, ಜೆರೊಂ ಎಂಬ ಕ್ರೈಸ್ತ ಪಂಡಿತನನ್ನು ಸುಲಭ ಶೈಲಿಯ ಲಾತೀನ್ ಭಾಷಾಂತರದ ಸತ್ಯವೇದವನ್ನು ತಯಾರಿಸಲು ನೇಮಿಸಿದರು. ಇವನು ಬೇತ್ಲೆಹೇಮಿನಲ್ಲಿ ಇಪ್ಪತ್ತೈದು ವರ್ಷಗಳಲ್ಲಿ ಅನೇಕ ಮೂಲ ಪ್ರತಿಗಳನ್ನು ಅಭ್ಯಾಸಿಸಿ ಕ್ರಿ.ಶ. 410 ರಲ್ಲಿ ಭಾಷಾಂತರದ ಕೆಲಸವನ್ನು ಪೂರೈಸಿದನು.

ಇದು ಲಾತೀನ್ ಭಾಷಾಂತರದ ಸತ್ಯವೇದವೆಂದು ಕರೆಯಲ್ಪಟ್ಟಿತು. ಜನರು ಪ್ರತಿದಿನ ಮಾತಾಡುತ್ತಿದ್ದ ಭಾಷೆಯಲ್ಲಿಯೇ ಇದು ಬರೆಯಲ್ಪಟ್ಟಿತು. ಈ ಸತ್ಯವೇದವು ಕ್ಯಾಥೋಲಿಕ್ ಸಭೆಗಳಲ್ಲಿ ಉಪಯೋಗಿಸಲು ಸ್ವೀಕೃತವಾಯಿತು. ಈಗಲೂ ಕೆಲವು ಸಭೆಗಳಲ್ಲಿ ಈ ಸತ್ಯವೇದವನ್ನೇ ಉಪಯೋಗಿಸುತ್ತಿದ್ದಾರೆ.

3. **ಇಂಗ್ಲಿಷ್ ಭಾಷಾಂತರಗಳು :–** ಹಿಂಸಾ ಕಾಲದಲ್ಲಿ ಸತ್ಯವೇದದ ಭಾಷಾಂತರಕ್ಕೆ ಹೆಚ್ಚಿನ ಪ್ರಯತ್ನವಿರಲಿಲ್ಲ. ಸತ್ಯವೇದದ ಕೆಲವು ಭಾಗಗಳನ್ನು ಬಹು ಕ್ಷೀಣಗತಿಯಲ್ಲಿ ಭಾಷಾಂತರಿಸಲಾಯಿತು. ಸಾಮಾನ್ಯ ಜನರಿಗೆ ತಿಳಿಯದ ಲಾತೀನ್ ಭಾಷೆಯಲ್ಲಿ ಸತ್ಯವೇದವು ಬಂಧಿಸಲ್ಪಟ್ಟಿತು. 1320–1384 ಆಂಗ್ಲ ಭಾಷಾ ಮೇಧಾವಿಯೂ ಸತ್ಯವೇದ ಪಂಡಿತನೂ ಆದ ಜಾನ್ ವಿಕ್ಲಿಫ್ ಎಂಬಾತನು ಇಡೀ ಸತ್ಯವೇದವನ್ನು ಆಗಿನ ಸಾಮಾನ್ಯ ಆಂಗ್ಲ ಭಾಷೆಯಲ್ಲಿ ಭಾಷಾಂತರಿಸುವ ಪ್ರಯತ್ನ ಮಾಡಿದನು. ಅವನು 1380 ರಲ್ಲಿ ಮೊಟ್ಟ ಮೊದಲನೇದಾಗಿ ಹೊಸ ಒಡಂಬಡಿಕೆಯನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದನು. ಅವನು ಸಾಯುವ ಮುನ್ನ ಎಷ್ಟರ ಮಟ್ಟಿಗೆ ಭಾಷಾಂತರಿಸಿದನೆಂಬುದು ತಿಳಿದಿಲ್ಲ. ಅವನ ಸ್ನೇಹಿತರು ಅವನ ಮರಣಾಂತರ ಭಾಷಾಂತರವನ್ನು ಪೂರೈಸಿದರು. ನಕ್ಷೆಯಲ್ಲಿ ತೋರಿಸಿದಂತೆ ವಲ್ಗೇಟ್ ಭಾಷಾಂತರವನ್ನು ಅವನು ಆಧರಿಸಿರುವನು ಎಂದು ತಿಳಿಯುವುದು. ನಂತರದ ಭಾಷಾಂತರಕಾರನು ವಿಲಿಯಂ ಟೆಂಡೇಲ್. ಇವನು ಪ್ರಾರಂಭದ ಧೀಮಂತ ಪುನ: ಸ್ಥಾಪಕನು. ಆಂಗ್ಲೇಯರಿಗೆ ಅವರ ಭಾಷೆಯಲ್ಲಿಯೇ ಸತ್ಯವೇದವಿರಬೇಕೆಂಬ ಆಕಾಂಕ್ಷೆ ಆಂಗ್ಲ ಭಾಷೆಯಲ್ಲಿ ಸತ್ಯವೇದವನ್ನು ತಯಾರಿಸಿದ್ದರಿಂದ ಇವನಿಗೆ ಇಂಗ್ಲೆಂಡಿನಲ್ಲಿ ಹಿಂಸೆಯುಂಟಾದ ಕಾರಣ ಇವನು ಬೇರೆ ಭೂಖಂಡಕ್ಕೆ ಹೋಗಿ 1525 ರಲ್ಲಿ ಹೊಸ ಒಡಂಬಡಿಕೆಯ ಗ್ರಂಥವನ್ನು 1530ರಲ್ಲಿ ಪಂಚಗ್ರಂಥ (ಧರ್ಮಶಾಸ್ತ್ರ)ವನ್ನು ಪೂರೈಸಿದನು.

ನಕ್ಷೆಯಲ್ಲಿ ತೋರಿಸಿದಂತೆ ಇವನು ವಿಕ್ಲಿಫನಂತೆ ವಲ್ಗೇಟ್ ಭಾಷಾಂತರವನ್ನು ಮಾತ್ರ ಆಧರಿಸಿದೆ. ಪುರಾತನ ಪ್ರತಿಗಳನ್ನು ಆಧ'ರಿಸಿರುವನು. ಟೆಂಡೇಲನು ಗ್ರೀಕ್ ಭಾಷಾಪಂಡಿತನಾಗಿದ್ದನು. ಗ್ರೀಕ್ ಭಾಷೆಯ ಎರಾಸ್‌ಮಸ್ ಗ್ರಂಥವನ್ನು ತಿಳಿದಿದ್ದನು. ಇವುಗಳ ಜ್ಞಾನವನ್ನು ವಿಕ್ಲೀಫನು

**ಜೀವಲೋಕದಲ್ಲಿಯೇ ಯೆಹೋವನ ದಯೆಯನ್ನು ಅನುಭವಿಸುವೆನೆಂದು ದೃಢವಾಗಿ ನಂಬಿದ್ದೇನೆ (ಕೀರ್ತ. 27:13).**

ಪಡೆದಿರಲಿಲ್ಲ. ಟೆಂಡೇಲನಿಗೆ ಇಂಗ್ಲಿಷ್ ಭಾಷೆಯ ಜ್ಞಾನವು ಇದ್ದಿತು. ಇದರ ಪರಿಣಾಮವಾಗಿ ಮುಂದಿನ ಭಾಷಾಂತರಕ್ಕೆ ಈತನ ಭಾಷಾಂತರವು ನಾಂದಿಯಾಯಿತು. ಈತನು ಹಳೇ ಒಡಂಬಡಿಕೆಯ ಭಾಷಾಂತರವನ್ನು ಪೂರೈಸುವದರೊಳಗಾಗಿ ರಕ್ತ ಸಾಕ್ಷಿಯಾಗಿ ಕೊಲ್ಲಲ್ಪಟ್ಟನು. ಈತನ ಉಳಿದ ಕೆಲಸವನ್ನು ಮತ್ತಾಯನ ಭಾಷಾಂತರದಲ್ಲಿ ನೋಡಸಿಗುವುದು.

ಮೈಲ್ಸ್ ಕೋವರ್ ಡೇಲ್ :– ಈತನು ಟೆಂಡೇಲನ ಸ್ನೇಹಿತನು. ಸತ್ಯವೇದವನ್ನು ತಯಾರಿಸಿ ಪ್ರಕಟಿಸಿ ಕ್ರಿ.ಶ. 1532 ರಲ್ಲಿ ಎಂಟನೇ ಹೆನ್ರಿಗೆ ಪ್ರತಿಷ್ಠಿಸಿದನು. ಕೋವರ್ ಡೇಲ್‌ನ ಹೊಸ ಒಡಂಬಡಿಕೆಗೆ ಗ್ರಂಥವು ಹೆಚ್ಚಾಗಿ ಟೆಂಡೇಲನ ಗ್ರಂಥವನ್ನು ಆಧರಿಸಿತ್ತು. ಆದರೆ ಕೋವರ್ ಡೇಲನು ಈ ವಿಷಯವನ್ನು ಒಪ್ಪದೆ ತಾನು ಲಾತೀನ್ ಮತ್ತಿತರ ಭಾಷೆಯ ಆವೃತ್ತಿಗಳನ್ನು ಟೆಂಡೇಲನ ಆವೃತ್ತಿಯಂತೆ ಬಳಸಿರುವೆನೆಂದು ಹೇಳುವನು.

ಮತ್ತಾಯನ ಸತ್ಯವೇದ ಕ್ರಿ.ಶ. 1537 :– ಅದೇ ಸಮಯದಲ್ಲಿ ಕೋವರ್ ಡೇಲನ ಎರಡನೇ ಆವೃತ್ತಿಯಾಗಿ ಇನ್ನೊಂದು ಭಾಷಾಂತರದ ಸತ್ಯವೇದವು ಪ್ರಕಟವಾಯಿತು. ಇದರ ಗ್ರಂಥಕರ್ತನು ಸ್ಪಷ್ಟವಾಗಿ ಯಾರೆಂದು ತಿಳಿಯದಿದ್ದರೂ ಮತ್ತಾಯನೆಂದು ಹೇಳಿದರೂ ಟೆಂಡೇಲನ ಸ್ನೇಹಿತನಾದ ಜಾನ್‌ರೋಜರ್ ಎಂದು ಪ್ರಕಟವಾಗಿದೆ. ಈ ಮೇಧಾವಿಯು ಟೆಂಡೇಲನು ಬರೆದ ಪ್ರಕಟವಾಗದೆ ಇರುವ ಸತ್ಯವೇದದ ಚರಿತ್ರಾ ಗ್ರಂಥಗಳನ್ನು ಹೊಂದಿದ್ದನು. ಮತ್ತಾಯನ ಭಾಷಾಂತರ ಸತ್ಯವೇದದಲ್ಲಿ ಟೆಂಡೇಲನ ಆಧುನಿಕ ಪ್ರಕಟಣೆ ಮತ್ತು ಕೋವರ್ ಡೇಲನ ಭಾಷಾಂತರಗಳನ್ನು ಹೊಂದಿರುವುದಾಗಿ ಆಧಾರವಿದೆ.

ಮಹಾಸತ್ಯವೇದ :– ಕ್ರಿ.ಶ. 1539. ನಕ್ಷೆಯಲ್ಲಿ ತೋರಿಸಿದಂತೆ ಈ ಸತ್ಯವೇದದ ಭಾಷಾಂತರವು ಮತ್ತಾಯ, ಕೋವರ್‌ಡೇಲ್ ಮತ್ತು ಟೆಂಡೇಲ್ ಸತ್ಯವೇದಗಳನ್ನು ಆಧರಿಸಿದೆ. ಮೊದಲಿನ ಆವೃತ್ತಿಯನ್ನು ಮೈಲ್ಸ್ ಕೋವರ್‌ಡೇಲ್ ಸತ್ಯವೇದದ ಆಧಾರದಿಂದ ತಯಾರಿಸಲಾಗಿದ್ದು ಅದನ್ನು ಪ್ರತಿಯೊಂದು ಸಭೆಯಲ್ಲೂ ಉಪಯೋಗಿಸಬೇಕೆಂದು ಅಪ್ಪಣೆ ಕೊಡಲಾಗಿತ್ತು. ದೇವರ ವಾಕ್ಯವನ್ನು ಕೇಳಲು ಜನರು ಗುಂಪು ಗುಂಪಾಗಿ ಸೇರುತ್ತಿದ್ದರು. ಈ ಸತ್ಯವೇದವು ಅತಿ ದೊಡ್ಡಗ್ರಂಥವಾಗಿದ್ದು ಇದನ್ನು ಸರಪಣಿಯಿಂದ ಓದುವ ಮೇಜಿಗೆ ದೇವಾಲಯಗಳಲ್ಲಿ ಕಟ್ಟಿಡುತ್ತಿದ್ದರು.

ಜಿನೀವಾ ಸತ್ಯವೇದ :– ಕ್ರಿ.ಶ. 1560. ಇಂಗ್ಲೆಂಡಿನ ರಾಣಿಯಾದ ಮೇರಿಯ ಹಿಂಸೆಯಿಂದ ಇಂಗ್ಲೆಂಡಿನಿಂದ ಜಿನೀವಾಕ್ಕೆ ಓಡಿಹೋದ ಸತ್ಯವೇದ ಪಂಡಿತರು ಭಾಷಾಂತರಿಸಿದ ಸತ್ಯವೇದ. ಇದು ಇತರ ಆಂಗ್ಲ ಭಾಷೆಯ ಮತ್ತು ಮಹಾಸತ್ಯವೇದದ ಭಾಷಾಂತರದ ಪರಿಷ್ಕೃತ ಸತ್ಯವೇದ. ಈ ಸತ್ಯವೇದವು ಇಂಗ್ಲೆಂಡಿನಲ್ಲಿ ಸುಲಭವಾಗಿ ಕೈಯಲ್ಲಿ ಹಿಡಿದುಕೊಳ್ಳುವ ಪರಿಷ್ಕೃತ ಭಾಷಾಂತರದ ಸತ್ಯವೇದವಾಗಿ ಬಹಳಕಾಲ ಉಪಯೋಗಿಸಲ್ಪಟ್ಟಿತು.

ಬಿಶೋಪರ ಸತ್ಯವೇದ :– ಕ್ರಿ.ಶ. 1568. ಎಲಿಜಬೆತ್ ಮಹಾರಾಣಿಯ ಕಾಲದಲ್ಲಿ ಆರ್ಚ್ ಬಿಶೋಪ್ ಕೆಂಟರ್‌ಬರ್ರಿಯ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಸತ್ಯವೇದ. ಜೀನಿವಾ ಆವೃತ್ತಿಯನ್ನು ಆಧರಿಸಿ ಮಹಾಸತ್ಯವೇದದ ಪರಿಷ್ಕೃತ ಭಾಷಾಂತರವಾಗಿ ಹೆಚ್ಚಾಗಿ ಬೋಧಕರು ಉಪಯೋಗಿಸುತ್ತಿದ್ದು ಸಾಮಾನ್ಯ ಜನರಲ್ಲಿ ಅಷ್ಟೊಂದು ಸದ್ಬಳಕೆಯಾಗಿರಲಿಲ್ಲ.

ಬಿಶೋಪರ ಸತ್ಯವೇದ :– ಲಾತೀನ್ ಭಾಷೆಯ ರೋಮನ್ ಕೆಥೋಲಿಕ್ ಆವೃತ್ತಿ. ರೈಮ್ಸ್‌ನಲ್ಲಿ ಕ್ರಿ.ಶ. 1582ರಲ್ಲಿ ಹೊಸ ಒಡಂಬಡಿಕೆ ಭಾಗವು ಪ್ರಕಟವಾಯಿತು. ದುಯೆಯಲ್ಲಿ ಕ್ರಿ.ಶ. 1609–1610 ರಲ್ಲಿ ಹಳೇ ಒಡಂಬಡಿಕೆ ಭಾಗವು ಪ್ರಕಟವಾಯಿತು. ಇದರಲ್ಲಿ ವಿವಾದಾತ್ಮಕ ವಿವರಣೆಗಳಿವೆ. ಸಾಮಾನ್ಯವಾಗಿ ಇಂಗ್ಲಿಷ್ ಭಾಷಾಂತರದ ಸತ್ಯವೇದವನ್ನು ರೋಮನ್ ಕೆಥೋಲಿಕರು ಅಂಗೀಕರಿಸಿರುವರು.

ಕಿಂಗ್ ಜೇಮ್ಸ್ ಆವೃತ್ತಿ ಅಥವಾ ಅಧಿಕೃತ ಭಾಷಾಂತರ: ಕ್ರಿ.ಶ. 1611 ಈ ಸತ್ಯವೇದವನ್ನು ಇಂಗ್ಲಿಷ್ ಭಾಷೆಯನ್ನಾಡುವ ಎಲ್ಲರೂ ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಇಂಗ್ಲೆಂಡಿನ ಮೊದಲನೆ ಜೇಮ್ಸ್ ಅರಸನು ನಲ್ವತ್ತೇಳು ಭಾಷಾ ಪಂಡಿತರನ್ನು ಆರಿಸಿ ಈ ಸತ್ಯವೇದವನ್ನು ತಯಾರಿಸಿದನು. ಬಿಶೋಪ್ ಸತ್ಯವೇದವನ್ನು ಈ ಭಾಷಾಂತರಕ್ಕೆ ತಳಹದಿಯನ್ನಾಗಿ ಇರಿಸಲಾಗಿದೆ.

ಉತ್ತಮ ಫಲಕ್ಕಾಗಿ ಇಬ್ರಿಯ ಮತ್ತು ಗ್ರೀಕ್ ಭಾಷೆಯ ಸತ್ಯವೇದವನ್ನು ಅಭ್ಯಾಸಿಸಿ ಇತರ ಇಂಗ್ಲಿಷ್ ಭಾಷಾಂತರದ ಸತ್ಯವೇದವನ್ನು ಆಧರಿಸಿ ಈ ಸತ್ಯವೇದವನ್ನು ತಯಾರಿಸಲಾಗಿದೆ. ಕಳೆದ ಮೂರು ಶತಮಾನಗಳಿಂದ ಇಂಗ್ಲಿಷ್ ಭಾಷೆಯವರಿಗೆ ಈ ಸತ್ಯವೇದವು ಬಹು ಉಪಯುಕ್ತವಾಗಿ ಕಂಡು ಬಂದಿದೆ.

ಪರಿಷ್ಕೃತ ಭಾಷಾಂತರ :– ಕ್ರಿ.ಶ. 1881–1884 ಇಂಗ್ಲಿಷ್ ಮತ್ತು ಅಮೇರಿಕದ ಸಂಯುಕ್ತ ವೇದ ಪಂಡಿತರಿಂದ ಭಾಷಾಂತರಿಸಲ್ಪಟ್ಟ ಸತ್ಯವೇದ. ನಕ್ಷೆಯಲ್ಲಿ ತೋರಿಸಿದಂತೆ ಅತಿ ಪುರಾತನ ಪ್ರತಿಗಳನ್ನು ಆಧರಿಸಿ ಭಾಷಾಂತರಿಸಲಾಗಿದೆ. ಮಾತ್ರವಲ್ಲದೆ ಅಧಿಕೃತ ಭಾಷಾಂತರವನ್ನು ಆಧರಿಸಿ ಇತರ ಎಲ್ಲಾ ಭಾಷಾಂತರಗಳನ್ನು ಆಧುನಿಕರಿಸಲಾಗಿದೆ. ಅಧಿಕೃತ ಭಾಷಾಂತರದ ಸತ್ಯವೇದವನ್ನು ತಯಾರಿಸುವಾಗ ಕೆಲವು ಪ್ರಾಚೀನ ಪ್ರತಿಗಳು ದೊರಕಿರಲಿಲ್ಲ.

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

**ಯೆಹೋವನು ತನ್ನ ಜನರಿಗೆ ಬಲವೂ ತಾನು ಅಭಿಷೇಕಿಸಿದವನಿಗೆ ಆಶ್ರಯದುರ್ಗವೂ ಆಗಿದ್ದಾನೆ (ಕೀರ್ತ. 28:8).**

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

## ಮಹಿಳೆಯರ ಸ್ವರ

**"ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನೆಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿ ಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು. ಅದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನ ಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿ ವಸ್ತುಗಳನ್ನೇ ಪೂಜಿಸಿ ಸೇವಿಸುವವ ರಾದರು. ಸೃಷ್ಟಿ ಕರ್ತನೊಬ್ಬನೇ ನಿರಂತರ ಸ್ತುತಿ ಹೊಂದ ತಕ್ಕವನು ಆಮೆನ್"** (ರೋಮ.1:21–23).

ಯೆಶಾ.40:18–20 ಹೀಗಿರಲು ದೇವರನ್ನು ಯಾರಿಗೆ ಹೋಲಿಸೀರಿ? ಯಾವ ರೂಪವನ್ನು ಆತನಿಗೆ ಸಮಮಾಡೀರಿ? ವಿಗ್ರಹವಾದರೋ ಶಿಲ್ಪಿಯು ಅದನ್ನು ಎರಕಹೊಯ್ಯುವನು, ಅಕ್ಕಸಾಲಿಗನು ಅದಕ್ಕೆ ಚಿನ್ನದ ಕವಚವನ್ನು ಬಡಿದು ಬೆಳ್ಳಿಯ ಸರಪಣಿಗಳನ್ನು ಮಾಡುವನು. [ಇಂಥದನ್ನು ದೇವರಿಗೆ] ಕಾಣಿಕೆಯನ್ನಾಗಿ ಪ್ರತಿಷ್ಠಿಸಿಕೊಳ್ಳಲಾರದ ಬಡವನು ಹುಳಿತು ಹೋಗದ ಮರವನ್ನು ಹುಡುಕಿ ಅಲುಗದ ವಿಗ್ರಹವನ್ನು ಮಾಡಿಸಲು ಕುಲವನ್ನು ವಿಚಾರಿಸಿಕೊಳ್ಳುವನು. ಯೆಶಾ. 40:25–26 ಹೀಗಿರಲು ನನ್ನನ್ನು ಯಾರಿಗೆ ಹೋಲಿಸಿ ಸರಿ ಸಮಾನ ಮಾಡುತ್ತೀರಿ ಎಂದು ಸದಮಲ ಸ್ವಾಮಿಯು ಕೇಳುತ್ತಾನೆ. ನಿಮ್ಮ ಕಣ್ಣುಗಳನ್ನು ಮೇಲಕ್ಕೆತ್ತಿಕೊಂಡು ನೋಡಿರಿ ಈ ನಕ್ಷತ್ರಗಳನ್ನು ಸೃಷ್ಟಿಸಿದಾತನು ಯಾರು? ಈ ಸೈನ್ಯವನ್ನು ಲೆಕ್ಕಕ್ಕೆ ಸರಿಯಾಗಿ ಮುಂದುವರಿಸುತ್ತಾನಲ್ಲ? ಎಲ್ಲವನ್ನು ಹೆಸರೆತ್ತಿ ಕರೆಯುತ್ತಾನೆ. ಆತನು ಅತೀ ಬಲಾಢ್ಯನು ಮಹಾಶಕ್ತನೂ ಆಗಿರುವುದರಿಂದ ಅವುಗಳೊಳಗೆ ಒಂದು ಕಡಿಮೆಯಾಗದು.

ನಾನು ಒಂದು ರೋಮನ್ ಕೆಥೋಲಿಕ್ ಕುಟುಂಬದಲ್ಲಿ ಹುಟ್ಟಿ ಬೆಳೆದು ಬಂದವಳಾಗಿದ್ದೇನೆ. ನಮ್ಮ ಮನೆಯಲ್ಲಿ ಯೇಸುವಿನ, ಮರಿಯಳ ಹಾಗೂ ಅನೇಕ ಸಂತರ ಮೂರ್ತಿಗಳನ್ನು ಇಟ್ಟುಕೊಂಡಿದ್ದೇವು ಇದು ತಪ್ಪು ಎಂದು ನಮಗೆ ಗೊತ್ತಿರಲಿಲ್ಲ ಅದಕ್ಕೆ ಕಾರಣ

1) ಸತ್ಯವೇದವನ್ನು ನಾವು ಗಮನಿಸುತ್ತಿರಲಿಲ್ಲ.
2) ಸತ್ಯವೇದ ಓದಿದರೂ ಅವರ ಸತ್ಯಗಳನ್ನು ಅರಿತುಕೊಳ್ಳಲಾಗುತ್ತಿರಲಿಲ್ಲ.
3) ಹುಟ್ಟಿದಂದಿನಿಂದ ಮೂರ್ತಿಗಳನ್ನು ತೋರಿಸಿ ಇದು ಮರಿಯ, ಇದು ಯೇಸು ಎಂದು ಕಲಿಸಿ ಕೊಡಲಾಗುತ್ತಿತ್ತು.
4) ಸತ್ಯವೇದಕ್ಕಿಂತಲೂ ಅಧಿಕವಾಗಿ ಚಾಲ್ತಿ ಮಾಗ್ನಿ ಎಂಬ ಧರ್ಮದ ಪುಸ್ತಕಕ್ಕೆ ಹೆಚ್ಚಿನ ಮನ್ನಣೆ ಇತ್ತು. (ಆ ಚಾಲ್ತಿ ಮಾಗ್ನಿ ಎಂಬ ಪುಸ್ತಕದಲ್ಲಿ ಇರುವಂತಹ ಪ್ರಾರ್ಥನಾ ವಿಧಿಗಳು ದೇವರ ವಾಕ್ಯಕ್ಕೆ ಅನುಸಾರವಾಗಿದೆಯೋ ಎಂಬ ಸತ್ಯ ತಿಳಿದಿರಲಿಲ್ಲ). ಯಾಕೆಂದರೆ ಆ ಚಾಲ್ತಿ ಮಾಗ್ನಿಂ ಎಂಬ ಪುಸ್ತಕದಲ್ಲಿರುವ ಪ್ರಾರ್ಥನೆಗಳು ದೇವರ ವಾಕ್ಯದಲ್ಲಿ (ಸತ್ಯವೇದ, ಪವಿತ್ರ ಬೈಬಲ್‌ನಲ್ಲಿ) ಇರುವ ಪ್ರಕಾರ ಇರಲಿಲ್ಲ.
5) ದೇವರ ವಾಕ್ಯ ಹೇಳುತ್ತದೆ, ನನ್ನ ಹೆಸರಿನಲ್ಲಿ ಪ್ರಾರ್ಥಿಸಿದರೆ ಕೊಡುತ್ತೇನೆ, ನನ್ನ ಹೆಸರಿನಲ್ಲಿ ಎಲ್ಲಿ ಇಬ್ಬರು ಮೂವರು ಸೇರಿ ಬರುತ್ತಾರೋ ಅಲ್ಲಿ ನಾನಿದ್ದೇನೆ (ಮತ್ತಾ. 18:19–20). ನನ್ನ ಹೆಸರಿನಲ್ಲಿ ಬೇಡಿಕೊಂಡಿದ್ದನ್ನು ಕೊಡುವೆನು ಅಂಥ ಯೇಸುಕ್ರಿಸ್ತನು ಹೇಳಿದ್ದಾರೆ. ಯೋಹಾ. 14:13, 15:16, 16:23 ಈ ವಾಕ್ಯಗಳು ನಮಗೆ ತಿಳಿದಿರಲಿಲ್ಲ. ಪ್ರಾರ್ಥನೆ ಮಾಡಬೇಕಾದರೆ ಕಣ್ಣ ಮುಂದೆ ಯಾವುದೇ ಒಂದು ಮೂರ್ತಿ (ಅಲ್ಟರ್) ಇರಬೇಕು ಎಂದು ಕಲಿಸಿದ್ದರು.
6) ಸತ್ಯವೇದಕ್ಕೆ(ಪವಿತ್ರ ಬೈಬಲ್) ಅಷ್ಟು ಮಹತ್ವ ಇರಲಿಲ್ಲ.
7) ಹಿರಿಯರು ಏನು ಕಲಿಸುತ್ತಾರೆ ಅದೇ ವೇದ ವಾಕ್ಯವಾಗಿತ್ತು. ಅದು ಸತ್ಯವಾಗಿರಲಿ ಅಥವಾ ಸುಳ್ಳಿರಲಿ.

ಹತ್ತು ಆಜ್ಞೆಗಳನ್ನು ನಾನು ಚಿಕ್ಕದಿರುವಾಗಲೇ ಬಾಯಿಪಾಠ ಮಾಡಿಕೊಂಡಿದೆ. ಅದು ಸತ್ಯವೇದದಲ್ಲಿ ಎಲ್ಲಿ ಬರೆಯಲ್ಪಟ್ಟಿದೆ ಎಂದು ಹುಡುಕುವ ಗೋಜಿಗೆ ಹೋಗಲಿಲ್ಲ. ಒಂದು ವೇಳೆ

15. **ಯೆಹೋವನು ತನ್ನ ಜನರಿಗೆ ಬಲವನ್ನು ಅನುಗ್ರಹಿಸುವನು; ಆತನು ತನ್ನ ಪ್ರಜೆಗೆ ಸುಕ್ಷೇಮವನ್ನು ದಯಪಾಲಿಸುವನು (ಕೀರ್ತ. 29:11).**

ಹುಡುಕಿದರೆ ಅನೇಕ ಸತ್ಯ ಆಗಲೇ ಗೊತ್ತಾಗುತ್ತಿತ್ತು. ಯಾಕೆಂದರೆ ನಾನು ರೋಮನ್ ಕೆಥೋಲಿಕ್ ಕುಟುಂಬದಲ್ಲಿ ಹುಟ್ಟಿ ಬೆಳೆಯುತ್ತಿದ್ದಾಗ ಕಲಿತ 10 ಆಜ್ಞೆಗಳಿಗೂ ಸತ್ಯವೇದದಲ್ಲಿ ಇರುವ 10 ಆಜ್ಞೆಗಳಿಗೂ ಸ್ವಲ್ಪ ವ್ಯತ್ಯಾಸವಿದೆ.

ನಾನು ರೋಮನ್ ಕೆಥೋಲಿಕ್ ಕುಟುಂಬದಲ್ಲಿ ಹುಟ್ಟಿ ಬೆಳೆಯುತ್ತಿದ್ದಾಗ ಚರ್ಚಿನಲ್ಲಿ ಕಲಿತ ಆಜ್ಞೆಗ್ಳು.

1. ಒಬ್ಬನೇ ದೇವರನ್ನು ಗೌರವಿಸು.
2. ದೇವರ ಹೆಸರನ್ನು ಅಯೋಗ್ಯ ಕಾರ್ಯಕ್ಕೆ ಎತ್ತಬಾರದು.
3. ಭಾನುವಾರ ದಿನವನ್ನು ಪರಿಶುದ್ಧವಾಗಿ ಕಾಪಾಡು.
4. ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು.
5. ಕೊಲೆ ಮಾಡಬೇಡ.
6. ವ್ಯಭಿಚಾರ ಮಾಡಬೇಡ.
7. ಕದಿಯಬಾರದು
8. ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬೇಡ.
9. ಮತ್ತೊಬ್ಬನ ವಸ್ತುವನ್ನು ಆಶಿಸಬೇಡ.
10. ಮತ್ತೊಬ್ಬನ ಸ್ತ್ರೀಯನ್ನು ಆಶಿಸಬೇಡ.

ಆದರೆ ಸತ್ಯವನ್ನು ತಿಳಿದ ನಂತರ ಸತ್ಯವೇದವನ್ನು ಓದುವಾಗ ತಿಳಿದು ಬಂದಂತಹ ಸತ್ಯ.

1. ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು (ವಿಮೋ. 20:3).

ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು, ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ, ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನು ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆ ಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿಯೂ ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಗೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ (ವಿಮೋ. 20:4–6).

ಮುಂದುವರಿಯುವದು........

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,
**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

---

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೈವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9740985802**

**ಆಶ್ರಿತರಿಗೋಸ್ಕರ ನೀನು ಎಲ್ಲರ ಮುಂದೆ ಮಾಡಿದ ಉಪಕಾರಗಳೂ ಎಷ್ಟೋ ವಿಶೇಷವಾಗಿವೆ**
**(ಕೀರ್ತ. 31:19).**

- **ಐರಿನ್ 1 ವರ್ಷದಿಂದ ಆರೋಗ್ಯ ಸರಿ ಇರಲಿಲ್ಲ. ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯಲ್ಲಿ ಸಭಾಪಾಲಕರಾದ ಪಾ॥ ಸುನಿಲ್‌ರವರು ಪ್ರಾರ್ಥಿಸಿದಾಗ ದೇವರು ಸಂಪೂರ್ಣ ಬಿಡುಗಡೆಯನ್ನು ಕೊಟ್ಟಿದ್ದಾರೆ.**
- **ಪ್ರಫುಲ್ಲ 7 ವರ್ಷದಿಂದ ಕೆಳ ಹೊಟ್ಟೆ ನೋವು ಇತ್ತು. ದೇವರು ಸ್ವಸ್ಥತೆಯ ಆರಾಧನೆಯಲ್ಲಿ ಸಂಪೂರ್ಣವಾಗಿ ಆರೋಗ್ಯವನ್ನು ನೀಡಿದ್ದಾರೆ.**
- **ಸಮೀರಾ 2 ತಿಂಗಳ ಹಿಂದೆ ಸೊಂಟ ನೋವು ಇತ್ತು. ಮಲಗುವುದಕ್ಕೆ, ಕೂತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ ಸ್ವಸ್ಥತೆಯ ಆರಾಧನೆಯಲ್ಲಿ ದೇವರು ಸಂಪೂರ್ಣ ಬಿಡುಗಡೆಯನ್ನು ಕೊಟ್ಟಿದ್ದಾರೆ.**
- **ಮಂಜುನಾಥ್ ಜಾರಿ ಬಿದ್ದು ಮೊಣಕಾಲು ನೋವಿನಿಂದ ನಡೆಯುವುದಕ್ಕೆ ಕಷ್ಟವಾಗುತ್ತಿತ್ತು. ಸ್ವಸ್ಥತೆಯ ಆರಾಧನೆಯಲ್ಲಿ ದೇವರು ನನ್ನನ್ನು ಮುಟ್ಟಿ ಗುಣಪಡಿಸಿದ್ದಾರೆ.**
- **ಅಲ್‌ಬಿಲ್ಲಾ 7–8 ವರ್ಷಗಳಿಂದ ಕೈ ಕಾಲು ನೋವು ಇತ್ತು. ಸ್ವಸ್ಥತೆ ಹಾಗೂ ಬಿಡುಗಡೆಯ ಆರಾಧನೆಯಲ್ಲಿ ದೇವರು ನನಗೆ ಪರಿಪೂರ್ಣ ಬಿಡುಗಡೆಯನ್ನು ಕೊಟ್ಟಿದ್ದಾರೆ.**
- **ಸುಮ ಬೈಕಿನಲ್ಲಿ ಹೋಗುತ್ತಿರುವಾಗ ನನ್ನ ಶಾಲೂ ಬೈಕಿನ ಚಕ್ರಕ್ಕೆ ಸಿಕ್ಕಿಕೊಂಡು ನಾನು ಮತ್ತು ಮಗು ಕೆಳಗೆ ಬೀಳಬೇಕಿತ್ತು ಆದರೆ ದೇವರು ನನ್ನನ್ನು ಮತ್ತು ಮಗುವನ್ನು ದೊಡ್ಡ ಅಪಾಯದಿಂದ ತಪ್ಪಿಸಿದ್ದಾರೆ ಆತನ ನಾಮಕ್ಕೆ ಸ್ತೋತ್ರ.**
- **ವರ್ಷ ತುಂಬಾ ದಿನಗಳಿಂದ ನನಗೆ ಭುಜದ ನೋವು ಇತ್ತು ದೇವರು ಅದರಿಂದ ಬಿಡುಗಡೆಯನ್ನು ಕೊಟ್ಟಿದ್ದಾರೆ.**
- **ಆಶಾ 3 ದಿನದಿಂದ ಗಂಟು ನೋವು ಇತ್ತು ಸ್ವಸ್ಥತೆ ಹಾಗೂ ಬಿಡುಗಡೆಯ ಆರಾಧನೆಯಲ್ಲಿ ಕರ್ತನು ನನ್ನನ್ನು ಮುಟ್ಟಿ ಸಂಪೂರ್ಣ ಗುಣಪಡಿಸಿದ್ದಾರೆ.**

## ಸಾಕ್ಷಿಯ ಸ್ವರ

ಹೆಸರು : **ಶುಕ್ರಿ**

ಊರು : ಗೋಕರ್ಣ

ನಾನು ಎಚ್.ಐ.ವಿ ರೋಗಿ ಆಗಿದ್ದೇನೆ. ನನಗೆ ಮಲೇರಿಯಾ ಜ್ವರ, ತಲೆನೋವು, ಎದೆನೋವು, ವಾಂತಿ, ಬಿ.ಪಿ. ಸುಗರ್ ಜಾಸ್ತಿಯಾಗಿ ನನ್ನ ಮಗನವರು ಉಡುಪಿಯಾ ಸರಕಾರಿ ಆಸ್ಪತ್ರೆಗೆ ಸೇರಿಸಿದರು. ವೈದ್ಯರು ಪರೀಕ್ಷೆ ಮಾಡಿ ಔಷಧ ಕೊಟ್ಟರು. ಔಷಧಿ ತೆಗೆದುಕೊಳ್ಳುವಾಗ ವಾಂತಿ ಆಗುತ್ತಿತ್ತು. ಊಟ ಮಾಡುವಾಗ ವಾಂತಿ ಆಗುತ್ತಿತ್ತು. ಊಟವಾಗಲಿ, ನೀರಾಗಲಿ ಯಾವುದನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಏಕೆಂದರೆ ಗಂಟಲಿನಲ್ಲಿ ನೋವು ಇರುವುದರಿಂದ ಏನನ್ನು ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ಶರೀರದಲ್ಲಿ ಬಲ ಇಲ್ಲದೆ ಎದ್ದು ಕುಳಿತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ನನಗೆ ಸರಿಯಾಗಿ ಪ್ರಜ್ಞೆ ಇಲ್ಲವಾಗಿತ್ತು. 2ವಾರ ಆಸ್ಪತ್ರೆಯಲ್ಲಿ ಇದ್ದೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲಿ ಆಗುವುದಿಲ್ಲ ಮನೆಗೆ ಕರೆದುಕೊಂಡು ಹೋಗಿ ಅಂತ ಹೇಳಿದರು. ಕೊನೆಗೆ ನನ್ನ ಮಗನು ವೈದ್ಯರ ಅಪ್ಪಣೆಪಡೆದುಕೊಂಡು ಊರಿಗೆ ಕರೆದುಕೊಂಡು ಹೋದರು.

ಮನೆಗೆ ಹೋದ ಮೇಲೆ ಕಾಯಿಲೆ ಜಾಸ್ತಿಯಾಗಿ ಪ್ರಜ್ಞೆ ಇಲ್ಲದೇ ಮಾತನಾಡಲಿಕ್ಕೆ ಆಗದೇ ಪ್ರಾಣ ಹೋಗುವ ಸ್ಥಿತಿಯಲ್ಲಿ ಇದ್ದೆ. ನನಗೆ ಶ್ವಾಸ ಮಾತ್ರ ಇತ್ತು. ಕೊನೆಗೆ ನನ್ನ ಮಗನು ಡಿ.ಜಿಎಮ್. ಬೇತೇಲಿಗೆ ಫೋನ್ ಮಾಡಿ ಪ್ರಾರ್ಥಿಸಲು ಹೇಳಿದರು. ಪಾ॥ ಸುನಿಲ್‌ರವರು ಮತ್ತು ಸಭೆಯವರೆಲ್ಲರೂ ಪ್ರಾರ್ಥಿಸಿದರು. ಭಾನುವಾರ ಸಂಜೆ 5 ಗಂಟೆಗೆ ಪ್ರಜ್ಞೆ ಬಂತು. ಮಾತನಾಡಲ್ಲಿಕ್ಕೆ ಆಯಿತು. ಊಟ ಮಾಡಿದೆ, ನೀರು ಮತ್ತು ಹಾಲು ಕುಡಿಯಲ್ಲಿಕ್ಕೆ ಆಯಿತು. ಎದೆ ನೋವು, ತಲೆನೋವು ಗುಣವಾಯಿತು. ಶರೀರದಲ್ಲಿ ಇರುವಂತ ಎಲ್ಲಾ ನೋವುಗಳು ಸಂಪೂರ್ಣವಾಗಿ ಗುಣವಾಯಿತು. ನನಗೆ ನಡೆಯಲ್ಲಿಕ್ಕೆ ಬಲ್ಲವಿಲ್ಲವಾಗಿತ್ತು ಕಣ್ಣೀರಿನಿಂದ ಯೇಸುಸ್ವಾಮಿಯಲ್ಲಿ ಪ್ರಾರ್ಥನೆ ಮಾಡಿದೆ. ಕೋಲಿನಲ್ಲಿ ಮೆಲ್ಲನೇ ನಡೆಯುವುದಕ್ಕೆ ಪ್ರಾರಂಭ ಮಾಡಿದೆ. ಒಂದು ವಾರದ ನಂತರ ಕೋಲು ಇಲ್ಲದೇ ನಡೆಯಲು ದೇವರು ಸಹಾಯ ಮಾಡಿದನು. ಈಗ ನಾನು ದೇವರ ಕೃಪೆಯಿಂದ ಚೆನ್ನಾಗಿದ್ದೇನೆ. ಯಾವ ಸಮಸ್ಯೆ ಇಲ್ಲ. ದೇವರಿಗೆ ಕೋಟಿ ಕೋಟಿ ಸ್ತೋತ್ರವಾಗಲಿ. ಪುನ: ನಾನು ವೈದ್ಯರ ಬಳಿ ಹೋದಾಗ ಅವರು ನನ್ನನ್ನು ನೋಡಿ ಆಶ್ಚರ್ಯಪಟ್ಟರು. **"ಆತನು ದೂತನನ್ನೋ ಎಂಬಂತೆ ತನ್ನ ವಾಕ್ಯವನ್ನು ಕಳುಹಿಸಿ ಅವರನ್ನು ಗುಣಪಡಿಸಿದನು; ಸಮಾಧಿಗೆ ಸೇರದಂತೆ ಮಾಡಿದನು"** (ಕೀರ್ತ. 107:20).

**ಯೆಹೋವನನ್ನು ನಿರೀಕ್ಷಿಸುವವರೇ, ದೃಢವಾಗಿರ್ರಿ; ನಿಮ್ಮ ಹೃದಯವು ಧೈರ್ಯದಿಂದಿರಲಿ**
**(ಕೀರ್ತ. 31:24).**

## ಮಕ್ಕಳ ಸ್ವರ

1. ದಾವೀದನಿಗೆ ವಿರೋಧವಾಗಿ ಎದ್ದು ಅವನಿಂದ ರಾಜ್ಯವನ್ನು ಕಿತ್ತುಕೊಂಡ ಆತನ ಮಗನು ಯಾರು?
2. ಮೋಶೆಯ ತಂದೆ–ತಾಯಿಗಳ ಹೆಸರೇನು?
3. ಮೋಶೆಯ ಹೆಂಡತಿ ಹೆಸರೇನು?
4. ಹಳೇ ಒಡಂಬಡಿಕೆಯಲ್ಲಿ ಪ್ರಥಮವಾಗಿ ಕೊಲೆಯಾದವನು ಯಾರು?
5. ಹೊಸ ಒಡಂಬಡಿಕೆಯಲ್ಲಿ ಅಥವಾ ಕ್ರೈಸ್ತ ಸಭಾ ಚರಿತ್ರೆಯಲ್ಲಿ ಪ್ರಥಮವಾಗಿ ರಕ್ತ ಸಾಕ್ಷಿಯಾದವರು ಯಾರು?
6. ಮೋಶೆಯು ಯಾವ ಬೆಟ್ಟದ ಮೇಲೆ ಮರಣಹೊಂದಿದನು?
7. ಸಾರಳು ಎಷ್ಟು ವರ್ಷ ಬದುಕಿದಳು ಮತ್ತು ಎಲ್ಲಿ ಸತ್ತಳು?
8. ಅಬ್ರಹಾಮನು ಸಾರಳು ತೀರಿಹೋದ ನಂತರ ಮದುವೆಯಾದ ಇನ್ನೊಬ್ಬ ಹೆಂಡತಿಯ ಹೆಸರೇನು?
9. ಅಬ್ರಹಾಮನು ಎಷ್ಟು ವರ್ಷ ಬದುಕಿದನು?
10. ಏಸಾವ – ಯಾಕೋಬರು ಹುಟ್ಟಿದಾಗ ಇಸಾಕನಿಗೆ ಎಷ್ಟು ವರ್ಷ?

### ಆಗಸ್ಟ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :

1. ಆದಿ. 2:1
2. ಕೀರ್ತ. 107:1
3. ಮತ್ತಾ. 5:13.
4. ಜ್ಞಾನೋ. 21:8
5. ಯೋಹಾ. 14:7
6. ಯೆಶಾ. 56:7.
7. ಲೂಕ. 10:22
8. ಪ್ರಲಾ. 3:27
9. ವಿಮೋ. 31:15–16
10. ಕೀರ್ತ. 23:1.

### ಉಲ್ಲಾಸ ಹೆಚ್ಚಿಸುವ ಬೆಳಗಿನ ಕಾಫಿ

ಕಚೇರಿಯಲ್ಲಿ ತುಂಬಾ ಹೊತ್ತು ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡಲು ನಿರಾಸಕ್ತಿ ಇದೆಯೇ? ಹಾಗಾದರೆ ಬೆಳಿಗ್ಗೆ ಕಚೇರಿಗೆ ಹೊರಡುವ ಮುನ್ನ ತಿಂಡಿ ಜೊತೆ ಕಾಫಿ ಕುಡಿಯುವುದನ್ನು ಮರೆಯಬೇಡಿ! ಹೀಗೆಂದು ಹೊಸ ಅಧ್ಯಯನವೊಂದು ಹೇಳುತ್ತದೆ.

ಓಸ್ಲೋ ವಿಶ್ವವಿದ್ಯಾನಿಲಯದ ಅಧ್ಯಯನದ ಪ್ರಕಾರ, "ಬೆಳಗ್ಗಿನ ಕಾಫಿ ಕುಡಿಯುವುದರಿಂದ ಕಚೇರಿಯಲ್ಲಿ ದಿನ ವಿಡೀ ಕೆಲಸ ಮಾಡುವವರ ಉಲ್ಲಾಸ ಹೆಚ್ಚಿಸುವುದಲ್ಲದೆ, ಭುಜ, ಬೆನ್ನು ನೋವಿಲ್ಲದೆ ಹಾಯಾಗಿ ಕೆಲಸ ಮಾಡಲು ಸಹಾಯ ಮಾಡುತ್ತದೆ. ಆದರೆ ಒಂದು ಕಪ್‌ಗಿಂತ ಹೆಚ್ಚು ಕಾಫಿ ಕುಡಿಯುವುದು ಸಹ ಒಳ್ಳೆಯದಲ್ಲ" ಎಂದು ಸಂಶೋಧನೆ ಹೇಳುತ್ತದೆ.

– ಸಂಗ್ರಹ.

**ಜೋಕ್ಸ್**

### ಕೆಲಸ ಜಾಸ್ತಿ

ಕೆಲಸದವನು : "ಸಾರ್, ನನಗೆ ಒಂದು ವಾರ ರಜಾ ಬೇಕು?"

ಬಾಸ್ : "ಸಾರಿ, ಒಂದು ವಾರ ರಜಾ ಕೊಡಲಾರೆ. ತುಂಬಾ ಕೆಲಸ ಇದೆ."

ಕೆಲಸದವನು : "ಅದು ಗೊತ್ತಿದ್ದೆ ನಾನು ರಜಾ ಕೇಳುತ್ತಿರುವುದು".

**ಯೆಹೋವನ ವಚನವು ಯಥಾರ್ಥವಾದದ್ದು; ಆತನ ಕೃತ್ಯವೆಲ್ಲಾ ನಂಬಿಕೆಯಾಗಿದೆ**

**(ಕೀರ್ತ. 33:4).**